installed machinery. Busy trucks are moving the logs that are stocked; they are worth thousands of rupees and the public are requesting the Government to prevent this. The school children are in danger and the school will be finished. The matter is pending; the municipality, the entire public and myself have approached the authorities for the last two months in this matter. No permission is given but the big contractor has installed machinery and still things are going on, because the Government is interested in trampling Marathi in that area. Otherwise, there cannot be any other reason. Further, I will furnish him with another instance. At Karwar, there is a full-fledged Marathi school known as Baikaur Bai Marathi School. In our area, girls are taught domestie science or such other subjects and not weaving, and spinning. This institution founded almost hundred years ago, is sought to be trampled by Government because this is a Marathi school. They have introduced handloom spinning and weaving. The teachers protested; the public protested to stop this spinning and weaving and introduce domestic science. But a deaf ear is given, for there is no response. The purpose of the District authorities as well as the Minister is very plain. They want to finish that school. Further, there are so many Marathi schools in Karwar, Supa and Halyal, particularly in the interior area of Supa. Nobody understands anything but Marathi. Still circulars are sent to all Marathi schools in Kannada and reports are sent in Kannada only. Marathi textbooks are not prescribed and not even declared and the teachers are dictated to have recourse to Kannada textbooks wherever Marathi textbooks are not available in Marathi schools. Is it democracy? Is it national integration? Is it justifiable? There is a purpose behind it. This Government wants to trample Marathi; this Government wants to trample upon the Marathi people. This is a position which none could tolerate.

I want to make a reference to a personal matter which was rather debated yesterday. Under the Constitution of India, Article 19(d), a citizen of this country can move freely without restriction. That being the position, in the month of April, I wrote to Prime Minister Pandit Nehru that we the people of Karwar, Supa and Halyal have got affinity to Goa on account of relatives, temples etc., and the restrictions may be abolished as they are quite unreasonable and opposed to the Constitution and in case they are not abolished on the 25th May, I would enter Goa without a passport.

MR. SPEAKER.—Am I to understand that the Member wants the House to think that it is not *sub judice*?

SRI B. P. KADAM.—It is no *sub judice* because not case has been launched.

MR. SPEAKER.—Yesterday the Minister for Home seems to have said that it is sub-judice. I have no facts before me. If the Member feels on safe ground that it is not *sub judice*, he is quite at liberty to do so.

SRI B. P. KADAM.—If the case is launched, and I am an accused, I must be intimated of it on the day it is sent to court. It cannot be *sub judice*.

SRI C. J. MUCKANNAPPA.—Summons may be on the way.

SRI B. P. KADAM.—Until I receive it, it cannot be *sub judice*. The External Affairs Ministry informed me that restrictions would be abolished; then I asked them to give a date. Then I told them that I should go alone. The local Police was also informed. On the 25th May, at 10.00 A.M. I left by bus for Goa. On the way I happened to come across the Inspector of Customs to whom I showed the Constitution of India which I was carrying; Article 19 (d) was convincing. Then I came across Mysore State Reserve Police. The Sub-Inspector's name was Giddappa. When I was in the bus, he used a very abusive language. I asked him to be a bit more courteous. I opened the Constitution and asked him to kindly go through the Constitutional provisions. In case he would go

through them, I said, I would gracefully get down from the bus. He threw the Constitution of India which I had in my hands and dragged my right hand and dragged me with such a terrific force with his subordinates and my shirt was torn. Then I was made to sit in the camp for six hours. He was corresponding on the wireless with Belgaum and subsequently with Bangalore which I could hear. I asked him that I should be allowed to go to Goa or to return to Karwar. He replied that he was seeking instructions. Subsequently the Belgaum Police told him that they were helpless and that they could not guide him. He had then wireless connection with Bangalore Police who told him that some action should be taken. At about 4 P.M. in the evening, he brought me to the Police Station at Chittakul and had a discussion with the Sub-Inspector and they prepared a charge against me under Section 353. The Police Sub-Inspector in charge who earlier prepared some other papers tore them off. It seems they earlier wanted to prosecute me for obstructing duty and all that. Sir, I have not used bad language. Never in my life have I been discourteous; never in my life have I lost my temper. I have always been quiet and I have always maintained my temper. If the Hon'ble Government wants to hang anybody they have the power to do so. They can hang anybody. I only urge upon them not to give a bad name simply because I represent the Maharashtra Ekikaran Samithi. I feel, them they may speak untruth but that shall not be in a valient mood. A coward may do anything. I remember the words of Shakespeare which I do not want to quote here. In the Middle Ages, slaves were given better treatment. I am a representative of a population of over 1,40,000. Is this the treatment extended to me? I referred the matter immediately on the same day to the Chief Minister. I could not write because my hand was aching. I requested my friend to type it. The Hon'ble Chief Minister was kind enough to acknowledge but nothing has been done. Within three or four days thereafter I sent an intimation—registered A.D. letter—to the I.G.P. that I want to take action against the officer for wrongful confinement using force against me and mischievously tearing my shirt. There is no acknowledgement of that letter. Is it in the fitness of things? I ask everybody in this House and through this House the whole of India whether such a treatment could be given to me simply because I am a member of the Maharashtra Ekikaran Samithi? Is it justified and whether it is in conformity with the noble principles which Pandit Nehru propounds and is it in conformity with national integrity? I want an answer. Further, I demand to know from the Government whether they have any scheme to kill the leaders of the Maharashtra Ekikarana Samiti? If so, let them say so.

4-00 P.M.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಮಾನ್ಯ ಅಧ್ಯಕ್ಷರೇ, ಈ ಅಂದಾಜು ಪತ್ರಿಕೆಯನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ನಾನು ಕೊಡ ಬಯಸುತ್ತೇನೆ. ನಿನ್ನೆಯಿಂದ ನಡೆದಿರುವ ಚರ್ಚೆಯನ್ನು ಸಾಧಾರಣವಾಗಿ ಪರಿಶೀಲಿಸಿದ್ದರಲ್ಲಿ, ನಮ್ಮ ವಿರೋಧ ಪಕ್ಷದ ಸ್ನೇಹಿತರು ಟೀಕೆ ಮಾಡಿದ್ದರಲ್ಲಿ ಕೆಲವು ಮಾತುಗಳನ್ನು ಸರ್ಕಾರದವರು ಸಹಾನುಭೂತಿಯಿಂದ ನೋಡುವುದಕ್ಕೆ ಅವಕಾಶವಿದ್ದರೂ, ಕೆಲವು ವಿಷಯಗಳಲ್ಲಿ ಅತಿಶಯೋಕ್ತಿಗಳು ತಲೆದೋರಿ ಆ ಸಹಾನುಭೂತಿಯೂ ದೊರೆಯದೆ ಹೋಗಬಹುದೆಂಬ ಭೀತಿ ಇದೆ. ಯಾವುದೇ ಮಾತನ್ನು ನಾವು ಸರ್ಕಾರದ ಎದುರಿಗೆ ಇಡುವಾಗಲೂ ಅತಿಶಯೋಕ್ತಿಯಾಗಲೀ, ಅತಿರಂಜಿತ ವಿಷಯ ಪ್ರತಿಪಾದನೆಯಾಗಲೀ ಇದ್ದರೆ ಹೆಚ್ಚು ಪರಿಣಾಮಕಾರಿಯಾಗಿರುವುದಿಲ್ಲ. ನಿನ್ನೆಯ ದಿವಸವೆಲ್ಲಾ, ಮಂತ್ರಿಮಂಡಳದ ವಿಸ್ತರಣೆಯ ಬಗ್ಗೆ ಮಾತನಾಡಿದುದು ದಲ್ಲಾ ಈ ರೀತಿಯಲ್ಲಿಯೇ ಇದೆಯೆನ್ನಬಹುದು. ಬಹುಶಃ ಮಂತ್ರಿಗಳು ವಿಸ್ತಾರದ ಮನೆಯನ್ನು ಮಾಡಿಕೊಂಡಿದ್ದು, ಹೊಸದಾಗಿ ಮೋಟಾರ್ ತೆಗೆದುಕೊಂಡಿದ್ದು, ಅವಶ್ಯಕತೆಗಿಂತ ಹೆಚ್ಚಿನ ಪ್ರತಿಷ್ಠೆಯನ್ನು ತೋರಿಸುವುದಕ್ಕೆ ಪ್ರಯತ್ನಿಸುವುದು—ಇವೆಲ್ಲಾ ಟೀಕಿಸಿದ್ದೇನೋ ಒಪ್ಪತಕ್ಕದ್ದೇ. ಏಕೆಂದರೆ ಈ ವಿಷಯಗಳಲ್ಲಿ ಅವಶ್ಯಕವಿದ್ದಷ್ಟು ಇದ್ದರೆ ಸಾಕು. ಉದಾಹರಣಾರ್ಥವಾಗಿ, ಮೊನ್ನೆತಾನೆ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಹೊಸದಾಗಿ ಒಂದು ಮನೆಗೆ ಹೋದರು. ಹಿಂದೆ ಅವರು ಸ್ಪೀಕರ್ ಆಗಿದ್ದಾಗ ಒಂದು ಬಂಗಲೆಯ ಮುಂಭಾಗದಲ್ಲಿ ಅವರು ಇದ್ದುಕೊಂಡು, ಹಿಂಭಾಗದಲ್ಲಿ ಒಬ್ಬ ಡೆಪ್ಯುಟಿ ಮಿನಿಸ್ಟರ್‌ರವರಿದ್ದರು. ಪಕ್ಕದ ಬಂಗಲೆಯಲ್ಲೇ ಮಂತ್ರಿಗಳಾದ ಪಾಟೀಲ್‌ರವರಿದ್ದರು. ಹಾಗಿದ್ದವರು ಈಗ ಎರಡು ಮನೆಗಳೂ ತಮ್ಮ ಉಪಯೋಗಕ್ಕೇ ಬೇಕೆಂದು ಹೇಳಿ ತೆಗೆದುಕೊಂಡಿದ್ದಾರೆ. ಈಗೇನೋ ಒಂದನ್ನು ಬಿಟ್ಟುಕೊಡಲಿಕ್ಕೆ ಒಪ್ಪಿದ್ದಾರೆ, ಸಂತೋಷ. ಈ ರೀತಿ

(ಶ್ರೀ ಎ. ಜೆ. ದೊಡ್ಡಮೇಟಿ)

ಕೆಲವು ವಿಷಯಗಳಲ್ಲಿ ತಿದ್ದುಪಡಿ ಮಾಡಿಕೊಂಡು ಜನರಲ್ಲಿ ಅಸೂಯಾ ಭಾವನೆ ಬೆಳೆಯದಂತೆ ಮಂತ್ರಿಗಳು ವರ್ತಿಸುವುದು ಒಳ್ಳೆಯದು. ಈ ದೃಷ್ಟಿಯಿಂದ ನೋಡಿದರೆ, ಕಾಂಗ್ರೆಸ್ಸಿನ ಧೋರಣೆ, ಕೀರ್ತಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ನಾನು ಹೇಳುತ್ತೇನೆ. ಟೀಕೆ ಮಾಡತಕ್ಕವರೂ ಕೂಡ ಅವಸರ ಅವಸರವಾಗಿ ಒಂದಕ್ಕೆ ಹತ್ತರಷ್ಟು ಅತಿರಂಜಿತೋಕ್ತಿಯಲ್ಲಿ ತುಚ್ಛವಾಗಿ ಹೇಳುವುದಕ್ಕೆ ಬದಲು ಅಯ್ಯಾ—ಅಪ್ಪಾ ಎಂದು ಒಳ್ಳೆಯ ಮಾತಿನಲ್ಲಿ ಹಾಗೆಮಾಡಿ, ಹೀಗೆ ಮಾಡಿ ಎಂದು ಸೂಚನೆಗಳನ್ನು ಕೊಡುವುದು ಒಳ್ಳೆಯದು ಮತ್ತು ಪರಿಣಾಮಕಾರಿಯಾಗುತ್ತದೆ.

ಇನ್ನು ಬಡ್ಜೆಟ್ಟಿನ ವಿಷಯವಾಗಿ ಹೇಳುವುದಾದರೆ ಸರ್ಕಾರದವರು ಮುಖ್ಯವಾಗಿ ಹಳ್ಳಿಗಳ ಸೌಕರ್ಯಗಳ ಬಗ್ಗೆ ಗಮನ ಕೊಡುವುದು ಅವಶ್ಯಕವಾಗಿದೆ. ಈ ದೃಷ್ಟಿಯಿಂದ ಏನೇನು ಮಾಡಬೇಕೆಂಬುದನ್ನು ನಾನು ಹೇಳುತ್ತೇನೆ.

ಒಟ್ಟಾರೆ ನೋಡುವುದಾದರೆ ಈ ಸರ್ಕಾರದವರು ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡುತ್ತಿಲ್ಲವೆಂಬುದು ಈ ಬಡ್ಜೆಟ್ಟಿನಲ್ಲಿ ಕಂಡುಬರುತ್ತದೆ. ಉದಾಹರಣೆಗಾಗಿ ಮಾರ್ಗ ಸೌಕರ್ಯ ನೋಡಿ. ಈ ವಿಷಯದಲ್ಲಿ ಈಗ ಆರು-ಎಂಟು ವರ್ಷಗಳಿಂದಲೂ ಎಷ್ಟೋ ಬೇಡಿಕೆಗಳು ಬರುತ್ತಿವೆ. ಆ ಬೇಡಿಕೆಗಳಿಗನುಸಾರವಾಗಿ ಒಂದು ಮಾರ್ಗವೂ ನಿರ್ಮಾಣವಾಗುತ್ತಿಲ್ಲ. ನಿರ್ಮಾಣವಾದ ಮಾರ್ಗಗಳೂ ಒಳ್ಳೆಯ ರೀತಿಯಲ್ಲಿ ಇಡಲ್ಪಡುತ್ತಿಲ್ಲ. ಈ ಮಾರ್ಗಗಳನ್ನು ಸರಿಯಾಗಿ ದುರಸ್ತಿಯಲ್ಲಿಡುವುಧಕ್ಕೆ, ಸೇತುವೆಗಳನ್ನು ಕಟ್ಟುವುದಕ್ಕೆ ತಾಲ್ಲೂಕ್ ಬೋರ್ಡುಗಳಲ್ಲಿ ದುಡ್ಡಿಲ್ಲವೆಂಬುದನ್ನು ಸರ್ಕಾರದವರೂ ಒಪ್ಪುತ್ತಾರೆ. ಏನೇ ಇದ್ದರೂ ಹಳ್ಳಿಗಳ ಕಡೆ ಒಳ್ಳೆಯ ಮಾರ್ಗಗಳು ಇಲ್ಲದಿದ್ದರೆ ಅಲ್ಲಿ ಉತ್ಪತ್ತಿಯಾದ ಸಾಮಾನುಗಳು ಪಟ್ಟಣಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ. ಪಟ್ಟಣಗಳ ಸಂಪರ್ಕವಿಲ್ಲದ ಮೇಲೆ ಹಳ್ಳಿಗಳಲ್ಲಿ ಬೆಳೆದ ವಸ್ತುಗಳಿಗೆ ಒಳ್ಳೆಯ ಧಾರಣೆ ಬರುವುದಿಲ್ಲ. ಹಳ್ಳಿಗಳವರ ನಾಗರಿಕತೆಯೂ ಬೆಳೆಯುವುದಿಲ್ಲ. ಈ ದೃಷ್ಟಿಯಿಂದ ಹಳ್ಳಿಗಳ ಕಡೆ ಉತ್ತಮ ಸಂಚಾರ ಮಾರ್ಗಗಳನ್ನೇರ್ಪಡಿಸಿ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಳವರ ಪುರೋಭಿವೃದ್ಧಿಯಾಗಬೇಕೆಂದಿದ್ದರೆ, ನಿಮಗೆ ನಿಜವಾಗಿ ಸಮಾಜಸತ್ತಾವಾದದಲ್ಲಿ ನಿಶ್ಚಿತ ನಂಬಿಕೆಯಿದ್ದರೆ ಹಳ್ಳಿಗಳ ಕಡೆ ಮಣ್ಣಿನ ರಸ್ತೆಗಳನ್ನಾದರೂ ಬೆಳಸಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಮೊನ್ನೆ ಹಳ್ಳಿಯಿಂದ ಬೆಂಗಳೂರಿಗೆ ಬಂದ ಕೆಲವು ಹಳ್ಳಿಯವರು ಇಲ್ಲಿನ ರಸ್ತೆಗಳನ್ನು ನೋಡಿ ನಮ್ಮ ದೇವರ ಮನೆ ಕೂಡ ಹೀಗಿಲ್ಲವಲ್ಲ; ಇಲ್ಲಿ ರಸ್ತೆಯ ಮೇಲೆಯೇ ಮಲಗಿಕೊಳ್ಳಲೇ ಎಂದು ಆಸೆಯಾಗುತ್ತದೆ ಎಂದುಕೊಂಡರು. ಆದ್ದರಿಂದ ಹಳ್ಳಿಗಳ ಜನರ ಕಷ್ಟವನ್ನು ನೀವು ನೋಡಬೇಕು. ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗುವುದಕ್ಕೂ ಆಗುತ್ತಿರುವುದಿಲ್ಲ. ಹತ್ತು ಸಾರಿ ಚಪ್ಪಲಿ ಒಗ್ಗಾಲಿಯಾಗಿರುತ್ತವೆ. ಈ ಕಷ್ಟಗಳನ್ನೆಲ್ಲಾ ನಾನು ವಿವರಿಸಿ ಹೇಳಹೊರಡಲಾರೆ. ದಯವಿಟ್ಟು ನಿಮ್ಮ ಪುನರ್ರಚನೆಯ ಕೆಲಸದಲ್ಲಿ ¾ ಭಾಗವನ್ನಾದರೂ ಹಣವನ್ನು ಹಳ್ಳಿಗಳಿಗೆ ಕೊಡಬೇಕು. ದೊಡ್ಡ ನೀರಾವರಿ ತೆಗೆದುಕೊಳ್ಳಿ, ವಿದ್ಯುಚ್ಛಕ್ತಿಯ ವಿಷಯವನ್ನು ತೆಗೆದುಕೊಳ್ಳಿ, ಶಿಕ್ಷಣ, ಮಾರ್ಗಸೌಕರ್ಯ ಯಾವುವೇ ತೆಗೆದುಕೊಳ್ಳಿ, ಹಳ್ಳಿಗಳು ಹಿಂದುಳಿದಿವೆ. ಮಾರ್ಗ ಸೌಕರ್ಯ ವಿಷಯದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ "ಕೆಲಸ ನಿಲ್ಲಿಸಲಿಕ್ಕೆ ತಾವು ಯಾವುವೇ ಹುಕ್ಕುಂ ಮಾಡಿಲ್ಲ" ಎಂದು ಇರಬಹುದು. ರಸ್ತೆ ಸರಿಮಾಡಿಸಿ ಕಲ್ಲುತರಿಸಿ ಹಾಕಿದ ಮೇಲೆ ಮುಂದುವರಿಸಲಿಕ್ಕೆ ದುಡ್ಡಿಲ್ಲವೆಂದರೆ, ಹಾಗೆ ಕಲ್ಲು ಹಾಕಿಸಿದ್ದರಿಂದೇನು ಪ್ರಯೋಜನ? ಬರೀ ಮಣ್ಣು ಹಾಕಿ ಬಂದರೇನು ಪ್ರಯೋಜನ? ನಮ್ಮ ಕಡೆಯಲ್ಲಿ ಕೆಲವರು ಪುಣ್ಯಾತ್ಮರು ರಸ್ತೆ ಮಾಡಿಸಲಿಕ್ಕೆಂದು ಪುಕ್ಕಟ್ಟೆ ಜಮೀನು ಬಿಟ್ಟುಕೊಟ್ಟಿದ್ದರೆ, ಇಂದು ಅಲ್ಲಿ ಸರಿಯಾಗಿ ರಸ್ತೆಯನ್ನೂ ಮಾಡದೆ ಹೋಗಿ ಅತ್ತ ತಮ್ಮ ಅಕ್ಕಪಕ್ಕದ ಜಮೀನೂ ನಾಶವಾಯಿತು, ರಸ್ತೆಯೂ ಸರಿಯಾಗಿ ಆಗಲಿಲ್ಲವೆಂದು ಪುಕ್ಕಟ್ಟೆ ರಸ್ತೆ ಕೊಟ್ಟಿದ್ದಕ್ಕೆ ವ್ಯಸನ ಪಡುತ್ತಿದ್ದಾರೆ. ಆದ್ದರಿಂದ ಹಳ್ಳಿಗಳ ಕಡೆ ಇದೇ ರೀತಿ ಅಲಕ್ಷ್ಯವನ್ನು ಮುಂದುವರಿಸಿದರೆ ಹಳ್ಳಿಗಾಡಿನ ಜನರಲ್ಲಿ ಯಾವ ರೀತಿ ಪ್ರತಿಕ್ರಿಯೆಯಾಗುತ್ತದೆ ಎಂಬುದನ್ನು ಗಮನಿಸಿರಿ. ಹಳ್ಳಿಗಾಡಿನ ಜನರಿಗೆ ಬಾಯಿಲ್ಲ, ಅವರು ಹೆಚ್ಚು ಮಾತನಾಡಲಾರರು, ಅವರು ಆಂದೋಳ ಮಾಡಲಾರರು ಎಂದು ತಿಳಿಯಬೇಡಿ. ಈಗೇನಿದ್ದರೂ ನೀವು ಹಳ್ಳಿಗಳವರ ಅನುಕೂಲಕ್ಕೆ ಮಾಡಿಕೊಟ್ಟಿರುವುದು ಎಂದರೆ N.E.S. ಯೋಜನೆ. ಅದರಿಂದಲಾದರೂ ನೀವು ಹಳ್ಳಿಗಳ ಪ್ರಗತಿಯನ್ನು ಸಾಧಿಸಬೇಕೆಂದಿದ್ದರೆ ಅದನ್ನು ಇನ್ನೂ ವಿಸ್ತೃತವಾದ ರೀತಿಯಲ್ಲಿ ಬೆಳೆಯುವಂತೆ ತಾಲ್ಲೂಕಾ ಬೋರ್ಡ್‌ಗಳಿಗೆ ಹೆಚ್ಚಿಗೆ ಹಣ ಕೊಡಬೇಕೆಂದು ಹೇಳುತ್ತೇನೆ. ಆ ಬಗ್ಗೆ ಯಾವುದಾದರೂ ನೀತಿ ಸರ್ಕಾರದವರಲ್ಲಿದ್ದರೆ ಅದನ್ನು ಬೇಗ ಜಾರಿಗೆ ಕೊಡಬೇಕು. ಮಾರ್ಗ ಸೌಕರ್ಯವನ್ನು ಒದಗಿಸುವ ಪ್ರಶ್ನೆಯನ್ನು ತಾಲ್ಲೂಕಾ ಬೋರ್ಡ್ ಅಥವಾ ಲೋಕಲ್ ಬೋರ್ಡಿಗೆ ಒಪ್ಪಿಸುವುದಾದರೂ ಅದಕ್ಕೆ ಹಣವೆಲ್ಲಿದೆ? ಹಣ ಕಡಮೆ ಕೊಟ್ಟಿದ್ದೀರಿ. ಅವರ ಜವಾಬ್ದಾರಿಯೇನೋ ಹೆಚ್ಚು. ಕೇವಲ ಲೋಕಲ್ ಬೋರ್ಡಿಗೆ ಹೆಚ್ಚಿನ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದರೆ ಅವರು ಏನು ಮಾಡುತ್ತಾರೆ? ಆದರೆ ಆಡಳಿತದಲ್ಲಿ ಬೇಕಾದಷ್ಟು ಲೋಪಗಳು ಉಂಟು. ಅಂಥಾದ್ದನ್ನೆಲ್ಲಾ ಸರ್ಕಾರದವರು ಪರಿಹಾರ ಮಾಡಲಿಕ್ಕೆ ಸಾಕಷ್ಟು ಪ್ರಯತ್ನಗಳು ಸಾಗುತ್ತಿಲ್ಲ. ಯೋಜನಾಬದ್ಧವಾದ ಕೆಲಸಕಾರ್ಯಗಳು ಹಳ್ಳಿಗಳ ಕಡೆ ನಡೆದಿಲ್ಲ. ನಗರ ಮತ್ತು ಹೆಚ್ಚು ಶ್ರೀಮಂತರು ಇರುವ ಕಡೆಗಳಲ್ಲಿ ಮಾತ್ರ ಈ ಯೋಜನಾ ಕೆಲಸಕಾರ್ಯಗಳು ನಡೆಯುತ್ತಿವೆ. ಇದರಿಂದೇನಾಗಿದೆ—ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಲೇ ಇದ್ದಾರೆ, ಬಡವರೇನೋ ಬಡವರಾಗಿಯೇ ಇದ್ದಾರೆ. ಇಂಥಾದ್ದು ಕಡಮೆಯಾಗಬೇಕು. ಸಮಾಜಸಮತಾವಾದವೆಂಬ ತತ್ವವನ್ನು ನಾವೆಲ್ಲರೂ ಒಪ್ಪಿದ್ದೇವೆ. ಆದರೆ ಅದು ಕೂಡಲೇ ದೇಶದಲ್ಲಿ ಇದುವರೆಗೆ ಏಕೆ ಜಾರಿಗೆ ಬರಲಿಲ್ಲವೋ ನನಗೆ ಗೊತ್ತಿಲ್ಲ. ಆ ತತ್ವವನ್ನು ಅರಿತುಕೊಂಡು ಎಲ್ಲರೂ ಚೆನ್ನಾಗಿ ದುಡಿಯಬೇಕು. ಇದರಿಂದಲೇ ಸರ್ಕಾರ ಶ್ರೀಮಂತರ ಅಥವಾ ಬಂಡವಾಳ ಷಾಹಿಗಳ ಪ್ರಭಾವಕ್ಕೆ ತುತ್ತಾಗುತ್ತಿದೆ. ಅದಾಗಬಾರದು. ಅವರಿಂದ ಪ್ರತ್ಯಕ್ಷವಾಗಿಯಾಗಲೀ ಅಥವಾ ಅಪ್ರತ್ಯಕ್ಷವಾಗಿಯಾಗಲ್ಲೀ ಏನಾದರೂ ಉಪಕಾರ ಕಂಡುಬಂದರೆ ಅಂಥಾದ್ದನ್ನು ತಡೆಹಾಕುವ ಪ್ರಯತ್ನ ಮಾಡಬಾರದು. ಅದು ಬಹಳ ಕಷ್ಟವಾಗುತ್ತದೆ. ಯಾವ ಕೆಲಸದಲ್ಲೇ ಆಗಲೀ ಅಥವಾ ಕಾರ್ಯದಲ್ಲೇ ಆಗಲೀ ಕೇವಲ ದುಡ್ಡು ಇದ್ದವರಿಗೆ ಮಾತ್ರ ಅನುಕೂಲ ಕಲ್ಪಿಸಬೇಕೆಂಬ ಮನಸ್ಸನ್ನು ಸರ್ಕಾರ ಹೊಂದಬಾರದು. ಸಮತಾ ಸಮಾಜವಾದ

ವನ್ನು ಸ್ಥಾಪಿಸುವುದಕ್ಕೋಸ್ಕರವಾಗಿ ಹಳ್ಳಿಗಳ ಕಡೆ ಸರ್ಕಾರದ ದೃಷ್ಟಿ ಹೋಗಬೇಕು. ಅವುಗಳ ಅಭಿವೃದ್ಧಿ ಜಾಗ್ರತೆಯಾಗಿ ಉಂಟಾಗಬೇಕು. ಈಗ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳನ್ನು ಹಳ್ಳಿಗಳ ಕಡೆ ತೆರೆಯಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ, ಸಂತೋಷ. ಆದರೆ ಈ ಬಗ್ಗೆ ಕೇಂದ್ರ ಸರ್ಕಾರದ ಸಹಾಯ ಯಥೇಚ್ಛವಾಗಿಬೇಕು. ನನ್ನ ತಾಲ್ಲೂಕಿನಲ್ಲಿಯೇ ನಾಲ್ಕೈದು ಕಡೆ ಚಿಕ್ಕ ಚಿಕ್ಕ ನೀರಾವರಿ ಯೋಜನೆಯ ಚಳುವಳಿಯನ್ನು ನಡೆಸಿದಾಗ ಅಲ್ಲಿ ಬಾವಿಗಳನ್ನು ಶಂಕುಸ್ಥಾಪನೆಗೋಸ್ಕರ ಒಂದು ಸಾರಿ ನನ್ನನ್ನು ಅಧ್ಯಕ್ಷನನ್ನಾಗಿರಬೇಕೆಂದು ಕೇಳಿದರು. ಆಗ ನಾನು ಕೆಲಸ ಪೂರ್ಣಯಾಗಿ ಮಾಡುವುದಾದರೆ ನಾನು ಅಧ್ಯಕ್ಷನಾಗಿರುತ್ತೇನೆ. ಇಲ್ಲವಿದ್ದರೆ ನನ್ನನ್ನು ಸುಮ್ಮನೆ ಬಯ್ಯಿಸಬೇಡಿ ಎಂದ ಹೇಳಿವೆ. ಇದಕ್ಕಾಗಿ ಸರ್ಕಾರದವರು ಸ್ವಲ್ಪ ಹಣವನ್ನು ಕೊಡುತ್ತಾರೆಂದೂ ಸಹ ಹೇಳಿದರು. ಈ ಮಾತನ್ನು ಹಿಂದಿನ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಸಹ ಹೇಳಿದ್ದರು. ಇನ್ನೂ ಇದುವರೆಗೆ ಆ ಕೆಲಸ ಪೂರ್ತಿಯಾಗಲೇ ಇಲ್ಲ. ಮತ್ತೆ ಎರಡು ಕೆರೆಗಳು ನನ್ನ ತಾಲ್ಲೂಕಿನಲ್ಲಿ ಎರಡು ವರ್ಷಗಳ ಕೆಳಗೇ ತೆಗೆಯಬೇಕೆಂದು ಕೇಳಿದ್ದೆವು. ಆಗಿನ ಚೀಫ್ ಇಂಜನಿಯರ್ ಸಹ 196 ನೇ ಸೆಪ್ಟೆಂಬರ್ ತಿಂಗಳಲ್ಲಿಯೇ ಆ ಕೆಲಸ ಮಾಡಿಸಿಕೊಡತ್ತೇನೆಂದು ಹೇಳಿದ್ದರು. ಆಗಲೂ ಆ ಕೆರೆಗಳನ್ನು ತೆಗೆಯಲಿಲ್ಲ, ಈಗಲೂ ಆ ಕೆಲಸವನ್ನು ಇದುವರೆಗೂ ತೆಗೆವ ಕೊಳ್ಳಲಿಲ್ಲ. ನಾನು ಈ ವಿಚಾರವಾಗಿ ಎಷ್ಟೋ ಸಾರಿ ಬಂದು ಮಂತ್ರಿಗಳನ್ನೂ ಮತ್ತು ಸಂಬಂಧಪಟ್ಟ ಸೆಕ್ರೆಟರಿಗಳನ್ನು ನೋಡಿದ್ದೂ ಆಯಿತು. ಯಾವ ಕೆಲಸವೂ ಅಗಲಿಲ್ಲ. ನಾನು ಬಂದು ನೋಡಿದರೆ ಏನು ಹೇಳಿದರೆಂದರೆ ಇದರಿಂದ ರಿಟರ್ನ್ ಕೇವಲ ಶೇಕಡ 1 ರಷ್ಟು ಬರುತ್ತದೆ, ಶೇಕಡ 30ರಷ್ಟು ನಮಗೆ ಬರಬೇಕು. ಈಗ ಆ ವಿಚಾರದಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟಿಗೂ ನಮ್ಮ ಇಲಾಖೆಗೂ ಕಾಗದ ಪತ್ರಗಳ ವ್ಯವಹಾರ ನಡೆಯುತ್ತಿದೆ ಎಂದು ಹೇಳಿವರು. ಆದ್ದರಿಂದ ಯಾವಾಗಲೂ ಸ್ಕೇರ್ಸಿಟಿ ಏರಿಯಾಗಳಲ್ಲಿ ಸರ್ಕಾರದವರು ಹೆಚ್ಚು ರಿಟರ್ನನ್ನು ಬಯಸುವ ಪರ್ಸಂಟೇಜ್ ಆಫ್ ರಿಟರ್ನನ್ನು ಇಳಿಸಬೇಕೆಂದು ನಾನು ಸಲಹೆಮಾಡುತ್ತೇನೆ. ಈ ವಿಚಾರವನ್ನು ಹಿ ದಿನ ಸಾರಿಯೂ ನಾನು ಹೇಳಿದ್ದೇನೆ.

ಶ್ರೀ ವೀರೇಂದ್ರಪಾಟೀಲ್.—ಈಗ ಆ ರೂಲನ್ನು ರಿಲ್ಯಾಕ್ಸ್‌ಮಾಡಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ಆ ರೂಲ್ಸನ್ನು ರಿಲ್ಯಾಕ್ಸ್ ಮಾಡಿದೆ ಎಂದು ಹೇಳಿದರು. ನನಗೆ ಬಹಳ ಸಂತೋಷ. ಈಗ ಆ ರೂಲ್ಸ್ ರಿಲ್ಯಾಕ್ಸ್ ಆಗಿರುವುದರಿಂದ ಈ ಕೆರೆಗಳ ಯೋಜನಾ ಕೆಲಸ ಜಾಗ್ರತೆಯಾಗಿ ಒಂದು ವರ್ಷದೊಳಗೆ ಮುಗಿಯುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು. ಕ್ಷಾಮ ನಿವಾರಣೆಗಾಗಿ ಮಲಪ್ರಭಾ ಮತ್ತು ಅಪ್ಪರ್ ಕೃಷ್ಣಾ ಯೋಜನೆಗಳು ಜಾಗ್ರತೆಯಾಗಿ ಜಾರಿಗೆ ಬರಲಿ. ಮಲಪ್ರಭಾ ಯೋಜನೆ ಈಗಾಗಲೇ ಜಾರಿಗೆ ಬರುವ ತರಹದಲ್ಲಿದೆ. ಅದು ಸರ್ಕಾರದ ಒಂದು ಬಿಗಿಯಾದ ಆಡಳಿತದ ಮೇಲೆ ಆವರಿಸಿರುತ್ತದೆ. ಕೃಷ್ಣಾ ನದಿಯ ನೀರನ್ನು ತೆಗೆದುಕೊಳ್ಳುವ ಬಗ್ಗೆ ಈ ಸಭೆ ಹಿಂದೆಯೇ ಒಂದು ನಿರ್ಣಯವನ್ನು ಪಾಸ್‌ಮಾಡಿ ಪೂರ್ಣ ಒಪ್ಪಿಗೆಯನ್ನು ಕೊಟ್ಟಿದೆ. ಆದರೆ ಬಿಜಾಪುರ ಜಿಲ್ಲೆಗೆ ಈ ಕೃಷ್ಣಾ ನದಿಯಿಂದ ಸಾಕಷ್ಟು ಅನುಕೂಲತೆಗಳು ಆಗುತ್ತಿಲ್ಲ, ಈ ಕಾರಣದಿಂದ ಕೇಂದ್ರದೊಡನೆ ನಮ್ಮ ಸರ್ಕಾರದವರು ವ್ಯವಹಾರಮಾಡಿ ಹೆಚ್ಚಿನ ಹಣ ಸಹಾಯವನ್ನು ಕ್ಷಾಮ ನಿವಾರಣೆಗಾಗಿ ಪಡೆಯಲು ಕೈಹಚ್ಚಬೇಕು. ಕೆಲವು ನನ್ನ ಸ್ನೇಹಿತರು ಇಲ್ಲದಸಲ್ಲದ ಆರೋಪಣೆಗಳನ್ನು ಮಾಡಿದರು. ಅವುಗಳಿಂದ ಏನೂ ಪ್ರಯೋಜನವಿಲ್ಲ. ಮತ್ತೊಮ್ಮೆ ನಮ್ಮ ಸರ್ಕಾರದವರು ಹಳ್ಳಿಗಳ ಅಭಿವೃದ್ಧಿ ಕಡೆ ಹೆಚ್ಚಿನ ಹಣ ಸಹಾಯಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಪ್ರದೇಶದಲ್ಲಿರತಕ್ಕ ಕೆಂಪು ಭೂಮಿಯೊಳಗೆ ನಮ್ಮ ಜನಗಳಿಂದ ಬಲವಂತದಿಂದಾದರೂ ಸಾಗುಮಾಡಿಸುವ ಪ್ರಯತ್ನ ಮಾಡಬೇಕು. ಕನಿಷ್ಠ ಒಂದೊಂದು ತಾಲ್ಲೂಕಿನೊಳಗೆ ಅಥವಾ ಒಂದೊಂದು ಜಿಲ್ಲೆಯೊಳಗೆ ಈ ಯೋಜನೆಯನ್ನು ಕಾರ್ಯಗತಮಾಡಬೇಕು. ಪ್ರತಿಯೊಂದು ಗ್ರಾಮದಲ್ಲೂ ಈ ಗ್ರೋ-ಮೋರ್-ಫುಡ್ ಕ್ಯಾಂಪೇನನ್ನು ಜಾರಿಗೆ ತರುವ ಕಾರ್ಯವನ್ನು ಕೂಡಲೇ ಕೈಗೊಳ್ಳಬೇಕು. ಕಾಗದ ಕೈಗಾರಿಕೆ ಮಾಡುವುದಕ್ಕೆ ಬದಲಾಗಿ ಪೈರು ಹೆಚ್ಚು ಬೆಳೆಯುವಂತ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಪರದೇಶಗಳಿಂದ ಟ್ರಾಕ್ಟರುಗಳನ್ನು ಮತ್ತು ಬುಲ್‌ಡೋಜರುಗಳನ್ನು ತರಿಸುವುದು ಬಹಳ ಒಳ್ಳೆಯದು. ಆದರೆ ಅನೇಕ ಲಗ್ಜುರಿ ಸಾಮಾನುಗಳನ್ನು ತರಿಸುವುದನ್ನು ಮಾತ್ರ ಕೂಡಲೇ ನಿಲ್ಲಿಸಿ. ಒಕ್ಕಲುತನದ ಅಭಿವೃದ್ಧಿಗೆ ಮತ್ತು ಭೂಸುಧಾರಣೆಗೆ ಬೇಕಾದಂತಹ ಉಪಯುಕ್ತವಾದ ಸಾಮಾನುಗಳನ್ನು ತಾವು ತರಿಸುವುದಕ್ಕೆ ಪ್ರಯತ್ನ ಮಾಡಬೇಕು. ಒಂದೊಂದು ಹಳ್ಳಿಯಲ್ಲೂ ಹೆಚ್ಚಿಗೆ ಆಹಾರ ಬೆಳೆಯಲಿಕ್ಕೆ ಸಕಲ ಪ್ರಯತ್ನಗಳನ್ನು ಮಾಡಿ ಆ ಬೆಳೆಗಳಿಗೆ ಸರಿಯಾಗಿ ಉತ್ತಮ ಬೆಲೆ ದೊರೆಯುವಂತೆ ಸರ್ಕಾರದವರು ಏರ್ಪಾಡುಮಾಡುವುದು ಈಗಿನ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ. ಇನ್ನು ತಾವು ಕೆಲವು ಕರಗಳನ್ನು ಬೇರೆ ಸೂಚಿಸುತ್ತಿದ್ದೀರಿ. ಆದರೆ ಹಳ್ಳಿಗಾಡುಗಳಲ್ಲಿ ಸರಿಯಾದ ಉತ್ಪನ್ನ ಬಾರದಿದ್ದರೂ ಅವರಿಂದ ಅಪ್ರತ್ಯಕ್ಷವಾಗಿಯಾದರೂ ಸರ್ಕಾರಕ್ಕೆ ಬಹಳ ಲಾಭ ಸಿಗುತ್ತದೆ. ಆದರೂ ಹಳ್ಳಿಗಾಡುಗಳಲ್ಲಿ ಹೆಚ್ಚಿನ ಮಟ್ಟಿಗೆ ಅಭಿವೃದ್ಧಿ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತಿಲ್ಲ. ನಮ್ಮ ಕಡೆ ಷೆಡ್ಯೂಲ್ ಕ್ಯಾಸ್ಟ್ ಹಾಸ್ಟಲ್ ತೆರೆಯುತ್ತೇವೆಂದು ಕಳೆದ ಸೆಪ್ಟೆಂಬರ್‌ನಲ್ಲಿಯೇ ಆಶ್ವಾಸನೆಯನ್ನು ಕೊಟ್ಟಿದ್ದರು. ಹಾಸ್ಟಲ್ ಕೇವಲ 60 ಸಾವಿರ ರೂಪಾಯಿಗಳಲ್ಲ ಆಗುವುದಿಲ್ಲ. ಮತ್ತೆ 40 ಸಾವಿರ ರೂಪಾಯಿಗಳು ಬೇಕು ಎಂದು ಹೇಳಿದರು. ಅದೇನಾಯಿತೋ ಗೊತ್ತಿಲ್ಲ. ಅದು ಇನ್ನೂ ರೆಡ್‌ಟೇಪಿಜಂ ಒಳಗೇ ಓಡಾಡುತ್ತಿದೆ. ಏನು ಕಾರಣವೆಂಬುದನ್ನು ಸರ್ಕಾರದವರು ವಿಚಾರಮಾಡಬೇಕು. ಹರಿಜನ ಗಿರಿಜನರನ್ನು ಹೆಚ್ಚಿಗೆ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನಮಾಡಬೇಕು. ಮುಂದಿನ ಚುನಾವಣೆಯ ಹೊತ್ತಿಗೆ ಇದೆಲ್ಲಾ ಸರಿಯಾದ ರೀತಿಯಲ್ಲಿ ಆಗಬೇಕೆಂಬ ಗುರಿಯನ್ನು ಸರ್ಕಾರದವರು ಇಟ್ಟುಕೊಂಡು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕು ಎಂಬುದಾಗಿ ನಾನು ಸಲಹೆಮಾಡುತ್ತೇನೆ. ಒಂದು ಉತ್ತಮ ಮನೋವೃತ್ತಿಗೆ ಬೆಳೆದುಕೊಂಡು ಬರುವ ಹಾಗೆ ಶಿಕ್ಷಣ ತಳಹದಿಯನ್ನು ಹಾಕಬೇಕು. ಈ ವಿಷಯವನ್ನು ನಾನು ಹೋದ ಸಾರಿ ಬಡ್ಜೆಟ್ ಭಾಷಣ ಮಾಡುವಾಗಲೂ ಹೇಳಿದ್ದೇನೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೆಸಿಡೆನ್ಷಿಯಲ್ ರಿಲಿಜಿಯಸ್ ಸ್ಕೂಲ್ ಅದರಲ್ಲೂ ಆಧ್ಯಾತ್ಮಿಕ ವಿಚಾರ ತಳಹದಿ ಇರತಕ್ಕ ಶಾಲೆಗಳನ್ನು ಏರ್ಪಾಡು ಮಾಡಬೇಕು. ಕೆಲವು ಶಿಕ್ಷಣ ಅಧಿಕಾರಿಗಳನ್ನು ಅದಕ್ಕಾಗಿ ನೇಮಿಸಬೇಕು. ಈಗ ಮೈಸೂರಿನಲ್ಲಿರತಕ್ಕ ಶ್ರೀರಾಮಕೃಷ್ಣಾಶ್ರಮ

(ಶ್ರೀ ಎ. ಜೆ. ದೊಡ್ಡಮೇಟಿ)

ನಮೂನೆಯಲ್ಲಿ ಕೆಲವು ಆಧ್ಯಾತ್ಮಿಕ ಶಾಲೆಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕು.

ಇನ್ನು ಗೃಹ ಕೈಗಾರಿಕೆಗಳ ವಿಷಯದಲ್ಲಿ ಸರ್ಕಾರದವರು ಸೂಕ್ತವಾದ ವ್ಯವಸ್ಥೆಗಳನ್ನು ಏರ್ಪಾಡು ಮಾಡಿ ಆ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿಗೆ ಹಣ ಸಹಾಯ ಮಾಡಿ ಬಡಜನಗಳ ಹಿತವನ್ನು ಸಾಧಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri S. RAJAGOPAL (Kolar Gold Field).—Sir, I would like to place certain points before this House regarding my constituency. My friend Sri Kadam has very clearly explained about the expansion of the Ministry. I would like to request the Treasury Bench members to let this Ministry continue for the full term without any sort of confusion or disturbance because there is a lot of confusion going on now even amongst the members of the ruling party. Those who have not been able to enter the Ministry are dissatisfied and even the Ministers who have not got the portfolios they wanted are dissatisfied. If things go on in this way we are afraid whether this Ministry will continue or not for its full term. Its continuance or otherwise will depend upon how you are going to conduct yourselves at the ministerial level. That is why in the beginning itself I have to request the Treasury Bench members to allow at least this Ministry to carry on for the full term. If instead they go on creating confusion in this manner, then our neighbouring State like Andhra, Madras and Kerala will laugh at us. That is why I request the Congress members to allow this Ministry to continue for the full term.

The next point that I want to refer to is regarding recruitment of scheduled castes. There are safeguards given to them under the Constitution, but they are not implemented. Particularly in my place in the K.G.F. Undertaking they wanted to recruit 4 agents, probationers for the industry. Several appli-cations were received, but finally they selected 4 Brahmin candidates and this is in a place where more than 80 per cent of the population are scheduled castes people. One candidate who belonged to scheduled castes and considered to be second rank in the whole of Madras State was neglected without a chance being given. This is the manner in which scheduled castes people are treated in our area and this is the manner in which scheduled castes people are treated in every department. In every department they are not given proper representation. So I request the Government to appoint a committee to enquire into this problem and see that scheduled castes people are fully represented in all the services.

Then, Sir, for the past six years the scholarship committee of the Education Department has remained unchanged. I would request the Government to reconstitute this committee immediately. In this committee, people who have lost their representative character and who do not represent the public are still continuing as members. So I request the Government to reconstitute this committee immediately.

Then the next thing I would like to say is that the partisan attitude of the ruling party members and also the Ministers should be changed. If we approach the Ministes to inaugurate something they are afraid of accepting our invitations because the local Congressmen go and tell them that we do not belong to the Congress Party, that we are Communists and anti-social people and so they should not accompany us. I am not very happy to invite the Ministers, but I only want them to understand that they are Ministers not for the Congress Party but for the entire people of the State. This is the point that I want our Ministers to bear in mind. If that is not done then it creates a feeling in the minds of non-Congress people as well as other public that the Ministers are only for Congressmen and for the other people. This is the request that I want to make to our Ministers. The local Congressmen may be their own party men and they may be the leaders of the local Congress, but our Ministers should not be entirely guided by what they say. They must remember that they are Ministers also for the other party people and they should not neglect other party people.

Then, in the K.G.F. mining area a lot of disturbance is going on for the last 2 months. Since May there is no peace

and law and order there. This has been reported to the Home Minister, the I.G.P. as well as the Chief Minister, but no action has been taken so far. Individuals are being attacked. Even well placed and well-recognized unions are being attacked by anti-social elements. There is no security for individual life. Everyone has been threatened. Houses have been burnt. Every property has been looted in our area, but no police action has been taken. This is the state of affairs in our area. This matter has been brought to the notice of Government in an e l a b o r a t e manner, but so far no action has been taken. The disturbance in the K.G.F. area is not a fight between parties and parties, but the anti-social elements are fighting in that area. I would like to place this aspect before the Government and the Home Minister to appoint a Special Officer for that area and to enquire and find out who are all the culprits who are doing misch ef and creating trouble in that area. This is necessary to restore peace and order in that area.

With these words I would like to close my speech.

ಶ್ರೀ ಎಸ್. ಎಚ್. ಬಸಣ್ಣ (ಮೊಳಕಾಲ್ಮುರು).—ಮಾನ್ಯ ಸಭಾಪತಿಗಳೇ, ನಮ್ಮ ಮೈಸೂರು ಸಂಸ್ಥಾನದಲ್ಲಿ ಮೊಳಕಾಲ್ಮುರು, ಚಳ್ಳಕೆರೆ, ಹಿರಿಯೂರು ಈ ತಾಲ್ಲೂಕುಗಳು ಬಹಳ ಹಿಂದುಳಿದ ತಾಲ್ಲೂಕುಗಳಾಗಿರುತ್ತವೆ. ಈ ತಾಲ್ಲೂಕುಗಳ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡದೆ ಇರುವುದರಿಂದ ಅನೇಕ ಜನಗಳು ಬಹಳ ತೊಂದರೆಗಳಿಗೆ ಈಡಾಗಿರುತ್ತಾರೆ. ಈಗ ನಾಲ್ಕೈದು ವರ್ಷಗಳಿಂದಲೂ ಈ ತಾಲ್ಲೂಕುಗಳಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗದೆ ಅಲ್ಲಿನ ಜನಗಳು ತುಂಬಾ ತೊಂದರೆಗೆ ಈಡಾಗಿರುತ್ತಾರೆ. ಹೀಗಿದ್ದರೂ ಸಹ ಅಲ್ಲಿನ ಜನಗಳಿಗೆ ಕೆಲಸ ಸಿಕ್ಕುವಂಥಾ ಯಾವ ತರಹ ಅನುಕೂಲಗಳನ್ನೂ ಸರ್ಕಾರದವರು ಕಲ್ಪಿಸಿಕೊಟ್ಟಿರುವುದಿಲ್ಲ. ಮೊಳಕಾಲ್ಮುರು ತಾಲ್ಲೂಕಿನಲ್ಲಿ 1956ನೇ ಇಸವಿಯಲ್ಲಿ ಒಂದು ಟ್ಯಾಂಕ್ ಒಡೆದುಹೋಯಿತು ಇದುವರೆವಿಗೂ ಆ ಕೆರೆಯ ಕೆಲಸವನ್ನು ಶುರುಮಾಡಿಲ್ಲ. ಅಲ್ಲಿನ ರೈತರಿಗೆ ಎಷ್ಟರಮಟ್ಟಿಗೆ ತೊಂದರೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ಈ ವರ್ಷವಾದರೂ ಸರ್ಕಾರದವರು ಜರೂರಾಗಿ ಆ ಕೆರೆಯ ಕೆಲಸವನ್ನು ತೆಗೆದುಕೊಂಡು ಅಲ್ಲಿನ ಜನಗಳಿಗೆ ಅನುಕೂಲಪಡಿಸಿಕೊಡುತ್ತಾರೆಂದು ನಾನು ನಂಬಿದ್ದೇನೆ. ಯಗಚಿ ನದಿಯಿಂದ ಮಾರೀಕಣಿವೆಗೆ ಚಾನಲ್ ತೆಗೆದುಕೊಂಡುಬಂದು ಮಾರೀಕಣಿವೆಯಿಂದ ಒಂದು ಹೈಲೆವೆಲ್ ಚಾನಲ್ ಮಾಡಿ ಅದರ ಮುಖಾಂತರ ಚಳ್ಳಕೆರೆ, ಮೊಳಕಾಲ್ಮುರು ಮತ್ತು ಹಿರಿಯೂರು ತಾಲ್ಲೂಕುಗಳಿಗೆ ನೀರನ್ನು ಒದಗಿಸಿದರೆ ಅಲ್ಲಿನ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ಆ ತಾಲ್ಲೂಕುಗಳಲ್ಲಿ ಸರಿಯಾಗಿ ಮಳೆಯಾಗುತ್ತಿಲ್ಲ. ಭಾವಿಗಳನ್ನಾದರೂ ಹೆಚ್ಚಿಗೆ ಮಾಡಿಕೊಳ್ಳೋಣವೆಂದರೆ, ಸರ್ಕಾರದವರು ಬಾವಿಗಳನ್ನು ತೆಗೆಯುವುದಕ್ಕೆ ಸಹಾಯ ಮಾಡಿದರೂ ಅಧಿಕಾರಿಗಳು ಸರಿಯಾದ ವ್ಯವಸ್ಥೆಯನ್ನು ಮಾಡದೆ ಒಂದು ಬಾವಿಗೆ ಒಂದು ಸಾವಿರ ಒಂದೂವರೆ ಸಾವಿರ ರೂಪಾಯಿಗಳನ್ನು ಕೊಟ್ಟರೆ ಅದರಿಂದ ರೈತ ಬಾವಿಯನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವ ವಿಚಾರವನ್ನು ಸರ್ಕಾರದವರು ಆಲೋಚನೆ ಮಾಡಬೇಕಾಗಿದೆ. ಪ್ರತಿಯೊಂದು ಭಾವಿಗೂ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದವರು ಮಾಡಿದ್ದಾರೆ. ಹೀಗಿದ್ದರೂಸಹ ಅಧಿಕಾರಿಗಳು ಒಂದು ಭಾವಿಗೆ ಒಂದು ಸಾವಿರ ಒಂದೂವರೆ ಸಾವಿರ ರೂಪಾಯಿಗಳನ್ನು ಕೊಟ್ಟರೆ ರೈತನ ಗತಿ ಏನು? ಅದರಿಂದ ಅವನು ಬಾವಿಯನ್ನು ತೆಗೆಸುವುದಕ್ಕೆ ಸಾಧ್ಯವಾಗುತ್ತದೆಯೇ? ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ರೈತ ತನ್ನ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಮಾರ್ಟಗೇಜ್ ಮಾಡಿದರೂ ಅವನಿಗೆ ಬಾವಿ ಬರುವಂತಿಲ್ಲ. ಬೇರೆ ಕಡೆ ಅವನಿಗೆ ಸಾಲ ಹುಟ್ಟುವುದಿಲ್ಲ. ಈ ತರಹ ರೈತರು ತುಂಬಾ ಕಷ್ಟಕ್ಕೆ ಸಿಕ್ಕಿ ನರಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಜರೂರಾಗಿ ಅಲ್ಲಿಗೆ ಒಬ್ಬ ಆಫೀಸರನ್ನು ಕಳುಹಿಸಿ ಪ್ರತಿಯೊಂದು ಭಾವಿಯನ್ನೂ ಪರೀಕ್ಷೆ ಮಾಡಿ ತಕ್ಷಣ ರೈತರಿಗೆ ಹಣವನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆಂದು ನಾನು ನಂಬಿದ್ದೇನೆ. ನಮ್ಮ ಚಳ್ಳಕೆರೆ ಮತ್ತು ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಈಗ ಐದಾರು ವರ್ಷಗಳಿಂದ ಸರಾಸರಿ ಹತ್ತು ಅಂಗುಲಕ್ಕಿಂತ ಜಾಸ್ತಿ ಮಳೆ ಆಗಿಲ್ಲ.

ಆದ್ದರಿಂದ ಯಾವಾಗಲೂ ನೀರು ಹರಿಯುವಂತೆ ತುಂಗಭದ್ರಾ ಚಾನಲ್‌ನಿಂದ ಒಂದು ಶಾಖೆಯನ್ನು ತೆಗೆದುಕೊಂಡು, ಲಕ್ಕವಳ್ಳಿ ಚಾನಲ್‌ನಿಂದ ಬರತಕ್ಕ ಒಂದು ಶಾಖೆಯನ್ನು ತೆಗೆದುಕೊಂಡು ಈ ಎರಡು ತಾಲ್ಲೂಕುಗಳಿಗೂ ಅನುಕೂಲ ಮಾಡಿಕೊಡಬೇಕಾಗಿ ನಾನು ಪ್ರಾರ್ಥಿಸುತ್ತೇನೆ.

4-30 P.M.

ಕೈಗಾರಿಕೆ ವಿಚಾರದಲ್ಲಿ ನಮ್ಮ ಸರ್ಕಾರದವರು ಸಿಟಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕೈಗಾರಿಕೆಗಳನ್ನು ಹೆಚ್ಚುಹೆಚ್ಚಾಗಿ ಸ್ಥಾಪನೆ ಮಾಡುತ್ತಾ ಹೋಗುತ್ತಾ ಇದ್ದಾರೆಯೇ ವಿನಾ ಹಳ್ಳಿಗಳಲ್ಲಿ ಒಂದು ಕೈಗಾರಿಕೆಯನ್ನೂ ಏರ್ಪಡಿಸಿಲ್ಲ. ತಾಲ್ಲೂಕಿನಲ್ಲಿ ಅಲ್ಲಿಯ ಜನಗಳಿಗೆ ಕೆಲಸ ಸಿಕ್ಕುವಂತೆ ಮಾಡುತ್ತಾ ಇಲ್ಲ. ಹೀಗಾದರೆ ಹಳ್ಳಿಯವರು ಎಲ್ಲಿಗೆ ಹೋಗಬೇಕು? ಪಟ್ಟಣಗಳಿಗೆ ಸೇರಬೇಕಾಗುತ್ತದೆ. ಕೆಲವು ದಿವಸಗಳಲ್ಲಿ ಜಮೀನು ಉಳುಮೆ ಮಾಡುವವರೇ ಸಿಕ್ಕದೇಹೋಗುವ ಕಾಲ ಬರಬಹುದು. ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ದೊಡ್ಡದೊಡ್ಡ ಕೈಗಾರಿಕೆಗಳನ್ನು ಹಳ್ಳಿಗಳಲ್ಲಿ ಏರ್ಪಾಡು ಮಾಡಿದರೆ ಅಲ್ಲಿನ ಜನಗಳಿಗೆ ಅನುಕೂಲವಾಗುತ್ತದೆ. ಅವರು ಜೀವನ ನಡೆಸುವುದಕ್ಕೆ ಸೌಕರ್ಯವಾಗುತ್ತದೆ. ಇಲ್ಲದೇ ಇದ್ದರೆ ನಮ್ಮ ಹಳ್ಳಿಗಳು ಮುಂದುವರಿಯುವುದಕ್ಕೆ ಸಾಧ್ಯವೇ ಇಲ್ಲ. ಈ ದಿವಸ 'ಹಳ್ಳಿಯಿಂದ ದಿಳ್ಳಿಗೆ' ಎಂಬ ನಾಣ್ಣುಡಿ ಇದೆ. ಸರ್ಕಾರದವರು ಪಟ್ಟಣಗಳ ಅಭಿವೃದ್ಧಿಯ ಕಡೆಗೆ ನೋಡುತ್ತಾ ಇದ್ದಾರೆಯೇ ಹೊರತು, ಹಳ್ಳಿಗಳ ಅಭಿವೃದ್ಧಿಯ ಕಡೆಗೆ ನೋಡುತ್ತಿಲ್ಲ. ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡಬೇಕು, ಗಮನ ಕೊಟ್ಟರೆ ಹಳ್ಳಿ ಜನಗಳಿಗೆ, ಹಳ್ಳಿಯ ಕೂಲಿಗಾರರಿಗೆ, ರೈತರಿಗೆ

(ಶ್ರೀ ಎಸ್. ಎಚ್. ಬಸಣ್ಣ)

ತುಂಬಾ ಅನುಕೂಲವಾಗುತ್ತದೆ ಎಂದು ಪ್ರಾರ್ಥನೆ ಮಾಡುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ.—ಈ ಇಲಾಖೆಯವರು ಬಸ್‌ಗಳನ್ನು ಚೆಕ್ ಮಾಡದೇ ಬಹಳ ಹಣ ಅನಾವ್ಯಯವಾಗುತ್ತಾ ಇದೆ. ಇಷ್ಟುಮಟ್ಟಿಗೆ ಸರ್ಕಾರ ನೋಡಿಕೊಳ್ಳತಕ್ಕ ಪಕ್ಷದಲ್ಲಿ ಏಕೆ ಈ ಬಸ್ಸುಗಳನ್ನು ತೆಗೆದುಕೊಳ್ಳಬೇಕು ? ನಡೆಸಬೇಕು ? ಸರಿಯಾದ ವ್ಯವಸ್ಥೆ ಮಾಡಿ, ಸರಿಯಾದ ರೀತಿಯಿಂದ ನಡೆಸುವ ಪಕ್ಷದಲ್ಲಿ ಮಾತ್ರ ಈ ಬಸ್ ರೂಟ್‌ಗಳನ್ನು ತೆಗೆದುಕೊಂಡು ಅವನ್ನು ನಡೆಸಬೇಕಾದ್ದು ಸರ್ಕಾರದ ಕರ್ತವ್ಯ. ಹೀಗಲ್ಲದೇ ಸುಮ್ಮನೆ ಸರ್ಕಾರಿ ಬಸ್ಸುಗಳನ್ನು ಹಾಕಿ, ಚೆಕ್ ಇಲ್ಲದೆ, ಕಂಡಕ್ಟರುಗಳು ಡ್ರೈವರ್‌ಗಳ ಸಂಬಳ ಕೊಡುವುದಕ್ಕೆ ಮಾತ್ರ ಸರ್ಕಾರಿ ಸರ್ವಿಸ್ ಇದೆಯೇ ವಿನಾ ಸರ್ಕಾರಕ್ಕೆ ಅನುಕೂಲವಾಗಲಿ, ಜನಗಳಿಗೆ ಅನುಕೂಲವಾಗಲಿ ಎಂಬ ಅಭಿಪ್ರಾಯದಿಂದ ಇಟ್ಟಿಲ್ಲ ಎಂದು ಕಾಣುತ್ತಾ ಇದೆ. ಯಾವ ಬಸ್ಸನ್ನೇ ತೆಗೆದುಕೊಳ್ಳಿ, ಜನ ತುಂಬಿರುತ್ತದೆ, ದುಡ್ಡು ಮಾತ್ರ ಇಲ್ಲ. ಹೇಳುವವರಿಲ್ಲ, ಕೇಳುವವರಿಲ್ಲ ಎನ್ನುವಂತೆ ವಿಚಾರ ನಡೆದಿದೆ. ಬಸ್ ಚಾರ್ಜು ಜಾಸ್ತಿ. ಉತ್ಪನ್ನ ಮಾತ್ರ ಕಡಿಮೆ ಬರುತ್ತಿದೆ. ಪ್ರೈವೇಟ್ ಬಸ್‌ಗಳಲ್ಲಿ ಚಾರ್ಜ್ ಕಡಿಮೆ ಆದರೂ ಉತ್ಪನ್ನ ಜಾಸ್ತಿ ಬರುತ್ತದೆ. ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಿ ಇದರ ಮೇಲೆ ಸರಿಯಾದ ಮೇಲ್ವಿಚಾರಣೆ ಇಡಬೇಕೆಂದು ಹೇಳುತ್ತೇನೆ.

ಈಗ ನಮ್ಮ ಸರ್ಕಾರದಲ್ಲಿ ಸುಮಾರು 30 ಜನ ಮಂತ್ರಿಗಳು ಇದ್ದಾರೆ. ಇನ್ನುಮುಂದಾದರೂ ಮಂತ್ರಿಗಳು ಹಳ್ಳಿಗಳ ಕಡೆಗೆ ಹೆಚ್ಚು ಗಮನ ಕೊಟ್ಟು........

ಒಬ್ಬ ಮಾನ್ಯ ಸದಸ್ಯರು.—30 ಜನ ಮಂತ್ರಿಗಳು ಎಲ್ಲಿ ಸ್ವಾಮಿ ಇದ್ದಾರೆ? (ನಗು!)

ಶ್ರೀ ಎಸ್. ಎಚ್. ಬಸಣ್ಣ.—30 ಜನರಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಮಂತ್ರಿಗಳು ಇರುವುದರಿಂದ ಹಳ್ಳಿಗಳ ಕಡೆಗೆ ಹೆಚ್ಚು ಗಮನ ಕೊಟ್ಟು, ಹಳ್ಳಿಗಳಲ್ಲಿ ಓಡಾಡಿ, ಅಲ್ಲಿ ಎಷ್ಟುಮಟ್ಟಿಗೆ ಅನುಕೂಲ ಮಾಡಿಕೊಡಬೇಕು, ಜನಗಳಿಗೆ ಏನು ಅನನುಕೂಲವಿದೆ, ತೊಂದರೆ ಇದೆ ಎಂಬ ವಿಷಯವನ್ನು ಚೆನ್ನಾಗಿ ತಿಳಿದುಕೊಂಡು ಆ ಜನಗಳಿಗೆ ಅನುಕೂಲಪಡಿಸಿಕೊಡಬೇಕೆಂದು ನನ್ನ ಅಭಿಪ್ರಾಯ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈಗಾಗಲೇ ಅನೇಕ ಮಿತ್ರರು ಈ ಬಡ್ಜೆಟ್ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮೈಸೂರಿನ ಆಡಳಿತ ಏನಾಗಿದೆ, ಈಗ ನೂತನವಾಗಿ ರಚನೆಯಾಗಿರತಕ್ಕ ಮಂತ್ರಿಮಂಡಲ ಏನೇನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ ಸ್ವಾಮಿ.

ಈಗಾಗಲೇ ಅನೇಕ ಸದಸ್ಯರುಗಳು ಹೇಳಿದ್ದಾರೆ. ಮಂತ್ರಿಮಂಡಲದಲ್ಲಿ ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿದ್ದು, ಮಂತ್ರಿಮಂಡಲವನ್ನು ಈ ದಿವಸ ಜಾಸ್ತಿ ಮಾಡಿಕೊಂಡು ದೇಶದ ಹಣವನ್ನು ಪೋಲು ಮಾಡುತ್ತಾ ಇದ್ದಾರೆ. ದೇಶದ ಹಣವನ್ನೆಲ್ಲಾ ಈ ದಿವಸ ಈ ಮಂತ್ರಿಗಳು ಅವರ ಐದು ಅಧಿಕಾರಾವಧಿಯಲ್ಲಿ ಮುಗಿಸುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ ಎಂದು ಹೇಳಿ ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ಮಂತ್ರಿಮಂಡಲವನ್ನು ಸರಿಯಾದ ರೀತಿಯಲ್ಲಿ ರಚನೆ ಮಾಡುವುದಕ್ಕೆ ತಮ್ಮಿಂದ ಸಾಧ್ಯವಾಗಿಲ್ಲ ಎಂಬ ವಿಚಾರವನ್ನು ತಮ್ಮ ಮತ್ತು ಸಭೆಯ ಗಮನಕ್ಕೆ ತರಲು ಒಂದು ನಿದರ್ಶನ ಇದೆ. ಹಿಂದಿನ ಮಂತ್ರಿಮಂಡಲ, ಜತ್ತಿ ಮಂತ್ರಿಮಂಡಲ ಹೋಗಿ ಕಂಠಿಯವರ ಮಂತ್ರಿಮಂಡಲ ಬಂತು. ಈ ದಿವಸ ನಾಯಕರಾಗಿರತಕ್ಕ ಶ್ರೀಮಾನ್ ನಿಜಲಿಂಗಪ್ಪನವರು ಜತ್ತಿಯವರ ಮಂತ್ರಿಮಂಡಲದ ಮೇಲೆ 29 ಆರೋಪಣೆಗಳನ್ನು ಹೊರಿಸಿದ್ದರು. ಯಾವ ವಿಚಾರದಲ್ಲಿ ಎಂದರೆ, ಅವರ ಆಡಳಿತ ದಕ್ಷ ಆಡಳಿತವಲ್ಲ, ಎಲ್ಲೆಲ್ಲೂ ಲಂಚಗುಳಿತನ ಜಾಸ್ತಿಯಾಗಿದೆ, ನಮ್ಮ ದೇಶದ ಆಡಳಿತವನ್ನು ಸರಿಯಾಗಿ ನಡೆಸುವುದಕ್ಕೆ ಸಾಧ್ಯವಾಗಿಲ್ಲ ಎಂದು ಅದರಲ್ಲಿ ಹೇಳಿದ್ದರು. ಮತ್ತೆ ಈ ಮಂಡಲದಲ್ಲಿ ಅಂಥವರನ್ನೇ ಸೇರಿಸಿಕೊಂಡು ಈ ದಿವಸ ವಿಶಾಲತಳಹದಿಯ ಮೇಲೆ ಮಂತ್ರಿಮಂಡಲ ರಚನೆಮಾಡಿದ್ದೇವೆ, ಗುಂಪು ರಾಜಕೀಯ ನಮ್ಮಲ್ಲಿ ಇಲ್ಲ, ಇನ್ನುಮುಂದೆ ಗುಂಪುಗಳೇ ಇರುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಇದು ಮೈಸೂರಿನ ರಾಜಕೀಯದಲ್ಲಿ ನಡೆಯುತ್ತಾ ಇರತಕ್ಕಂಥಾದ್ದು. ನಮ್ಮ ದುರದೃಷ್ಟ. ದೇಶದ ಆರ್ಥಿಕ ಸುಭದ್ರತೆಯನ್ನು ಏನುಮಾಡಿದ್ದಾರೆ ಎಂದು ಸಭೆಯ ಗಮನಕ್ಕೆ ತರಬೇಕಾಗಿದೆ. ಏಕೆಂದರೆ ಈ ದಿವಸ ಮಂಡಿಸಿರತಕ್ಕ ಬಡ್ಜೆಟ್‌ನಲ್ಲಿ ಯಾವ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೊ ಅದೆಲ್ಲವೂ ಕೂಡ ತಪ್ಪಾಗಿವೆ. ದೇಶದಲ್ಲಿ ದಕ್ಷ ಆಡಳಿತ ಕಡಮೆ ಆದ ಪ್ರಯುಕ್ತ ದೇಶದಲ್ಲಿರತಕ್ಕ ಹಣವನ್ನು ಈ ದಿವಸ ಅವರು ಸರಿಯಾಗಿ ವಿನಿಯೋಗಿಸದೇ ನಮ್ಮ ದೇಶದ ಎಲ್ಲ ಪ್ರಗತಿಯೂ ಕೂಡ ಕುಂಠಿತವಾಗಿದೆ. ಉದಾಹರಣೆಗೆ ಹೇಳುವುದಾದರೆ ಈ ದಿವಸ ಈ ಮಂತ್ರಿಮಂಡಲದಲ್ಲಿರತಕ್ಕಂಥ ಸದಸ್ಯರು ಇಲ್ಲಿ ಬಹಳ ಜನ ಸಭೆಯಲ್ಲಿ ಇಲ್ಲ ಎಂದು ಕಾಣುತ್ತದೆ. 30 ಜನ ಮಂತ್ರಿಗಳಾದರೂ ಕೂಡ ಈ ಸಭೆಯಲ್ಲಿ ಅವರ ಅಭಾವ ಬಹಳವಾಗಿ ಕಾಣುತ್ತದೆ. ಇನ್ನೂ ಅಷ್ಟು ಜನ ಮಂತ್ರಿಗಳನ್ನು ತೆಗೆದುಕೊಳ್ಳಬೇಕೆಂಬ ಆಶೆ ಇದೆಯೋ ಏನೋ ಗೊತ್ತಿಲ್ಲ. ದಕ್ಷಆಡಳಿತ ಯಾವ ರೀತಿಯಾಗಿ ನಡೆಯುಲಲ್ಲ ಎಂದು ಹೇಳತಕ್ಕ ವಿಚಾರದಲ್ಲಿ ತಮಗೆ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಸರ್ಕಾರದವರು ಈ ದಿವಸ ಒಂದು ಯೋಚನೆ ಜಾರಿ ಮಾಡಿದ್ದಾರೆ. ನಾನಾಗಲೇ ಹಿಂದೆ ಹೇಳಿದ್ದೆ. ಈ ಎನ್.ಇ.ಎಸ್. ಸ್ಕೀಂ ಎಂಬುದು Note Eating Scheme ಆಗಿದೆ ಎಂದು ಹೇಳುತ್ತಿದ್ದರು. ಈಗ ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ. "ನಷ್ಟ ಎಷ್ಟಾದರೂ ಸರಿಯೇ" ಎಂಬತಕ್ಕ ಸ್ಕೀಂ ಇದು ಎಂದು. ನಾನು ಈ ವಿಚಾರದಲ್ಲಿ ಬಹಳವಾಗಿ ಹೇಳಿದ್ದೇನೆ. ಈ ಎನ್. ಇ. ಎಸ್. ಸ್ಕೀಂನ್ನು ಮೊದಲು ತೆಗೆದು ಬಿಡಬೇಕು. ಇದರಲ್ಲಿರತಕ್ಕ ವಿದ್ಯಮಾನ ಹೇಳುತ್ತಾ ಹೋದರೆ ಎಷ್ಟು ಹೇಳಿದರೂ ಸಾಲದು. ಬಹಳ ಜನ ಹೇಳಿದ್ದಾರೆ, ಸರ್ಕಾರದ ಗಮನಕ್ಕೂ ಬಂದಿದೆ. ಸ್ವತಂತ್ರ ಪ್ರಜೆಗಳು, ಸ್ವತಂತ್ರ ದಿನಾಚರಣೆ ನಡೆಸಬೇಕು, ಭಾರತದ ಸ್ವಾತಂತ್ರ್ಯದ ಪ್ರತಿಫಲವನ್ನು ಅನುಭವಿಸಲು ಹಳ್ಳಿಗಳಲ್ಲಿ ಸಮಾರಂಭಗಳನ್ನು ನಡೆಸಬೇಕೆಂದು ಎನ್.ಇ.ಎಸ್. ಸ್ಕೀಂನಲ್ಲಿ 750 ರೂಪಾಯಿಗಳನ್ನು ಪ್ರತಿಯೊಂದು ಕಡೆಯಲ್ಲೂ ಹಂಚಿದರು. ಆ ಹಣವನ್ನು ಹಂಚದೇ, ತಿಂದಿದ್ದಾರೆ ಅಧಿಕಾರಿಗಳು. ಇದು ಬಹಳ ಶೋಚನೀಯವಾದ ವಿಚಾರ. ಈ ದಿವಸ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇದ್ದಿದ್ದರೆ ಅವರನ್ನೇ ಕೇಳುತ್ತಾ ಇದ್ದೆ. ಏಕೆಂದರೆ ಸ್ವಾತಂತ್ರ್ಯದಿನಾಚರಣೆಗಾಗಿ ಕೊಟ್ಟಂಥ ಹಣವನ್ನು—750 ರೂಪಾಯಿಗಳನ್ನು ತಿಂದಿರತಕ್ಕ

ಅಧಿಕಾರಿಗಳನ್ನು ಈ ದಿವಸ ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲೂ ನೋಡುತ್ತಾ ಇದ್ದೇವೆ. ಇದು ಎಷ್ಟು ಶೋಚನೀಯವಾದುದು ಎಂಬುದನ್ನು ಯೋಚನೆ ಮಾಡಬೇಕು. 750 ರೂಪಾಯಿಗಳನ್ನು ಅವರು ವಸೂಲು ಮಾಡಿಕೊಂಡು ಯಾವ ಪಂಚಾಯಿ ಗೂ ಕಳುಹಿಸದೆ ಈ ಹಣವನ್ನು ಲಪಟಾಯಿಸಿದ್ದಾರೆ. ಈ ಬಗ್ಗೆ ಯಾವ ತನಿಖೆಯೂ ಇಲ್ಲ, ಯಾವ ಅಧಿಕಾರಿಗಳೂ ಏನನ್ನೂ ಮಾಡಿಲ್ಲ. ಎನ್.ಇ.ಎಸ್. ಯೋಜನೆಯ ವಿಷಯದಲ್ಲಿ ಏಕೆ ಹೀಗೆ ಹೇಳುತ್ತೇನೆಂದರೆ, ಅಲ್ಲಿಯ ಸಿಬ್ಬಂದಿಯ ಸಂಬಳ ತಿಂಗಳಿಗೆ ಸುಮಾರು ಹತ್ತುಸಾವಿರ ರೂಪಾಯಿ ಆಗುತ್ತದೆ. 12 ತಿಂಗಳಿಗೆ ಒಂದು ಲಕ್ಷ ರೂಪಾಯಿಗಳ ಮೇಲೆ ಖರ್ಚಾಗುತ್ತಿದೆ. ಹೆಚ್ಚು ಹಣ ಜೀಪುಗಳು ಮತ್ತು ಸಮಾರಂಭಗಳಿಗೆ ಖರ್ಚಾಗುತ್ತಿದೆ. ಇಂಥಾ ಯೋಜನೆಗಳನ್ನು ಜಾರಿಗೆ ತಂದು ಜನರಿಗೆ ರಾಮರಾಜ್ಯ ಕೊಡುತ್ತೇವೆಂದು ಹೇಳಿದರೆ, ಇದು ದೇಶದ ದೌರ್ಭಾಗ್ಯವೆಂದು ಹೇಳಬೇಕಾಗಿದೆ. ಈ ವಿಚಾರದಲ್ಲಿ ಅನೇಕ ಸಾರಿ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರೂ ಏನೂ ಆಗಿಲ್ಲ. ಇದಕ್ಕೆ ಕಾರಣವೇನೆಂದು ವಿಚಾರಿಸಿ ಸರ್ಕಾರ, ಮಂತ್ರಿಮಂಡಲ ಏನಾದರೂ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆಯೆ ಎಂದು ಈ ಸಭೆಯು ಮುಂದೆ ಕೇಳಬೇಕಾಗಿದೆ. ಸಮತಾವಾದವನ್ನು ಅನುಷ್ಠಾನಕ್ಕೆ ತರುತ್ತೇವೆ, ದೇಶದಲ್ಲಿ ಜನರಿಗೆ ವಸತಿ ನಿರ್ಮಾಣ ಮಾಡುತ್ತೇವೆ, ಊಟ ತಿಂಡಿ ಎಲ್ಲಕ್ಕೂ ಅನುಕೂಲ ಮಾಡುತ್ತೇವೆ, ಬಡವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕೊಡುತ್ತೇವೆ ಎಂದು ಹೇಳುತ್ತಾರೆ. ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತರುತ್ತೇವೆ ಎಂದು ಹೇಳುತ್ತಿದ್ದಾರೆ. ಇದನ್ನು ಎಲ್ಲಿ ಜಾರಿಗೆ ತಂದಿದ್ದಾರೆ? ಮಕ್ಕಳು ಯಾವ ಶಾಲೆಗೆ ಹೋದರೂ ಅವರಿಗೆ ಸೀಟಿಲ್ಲ. ಇಷ್ಟು ಅಂಕಗಳು ಬಂದಿದ್ದರೆ ಸೀಟು ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಕೆಲವರಿಗೆ ಅಷ್ಟು ಬಾರದಿದ್ದರೂ ಸೀಟುಗಳನ್ನು ಕೊಡುತ್ತಿದ್ದಾರೆ. ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವ ವಿಚಾರವಲ್ಲಿ ನಾನು ಪ್ರತಿಭಟನೆ ಮಾಡುತ್ತೇನೆ. ಈ ದಿವಸ ಯಾವ ಸಾಮಾನ್ಯ ನಾಗರಿಕರಿಗೂ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳು ಸಿಕ್ಕುವುದಿಲ್ಲ. ಇವರು ಮಾಡಿರತಕ್ಕ ನೀತಿ ನಿಯಮಗಳ ಪ್ರಕಾರ ಶೇಕಡ ಇಷ್ಟಕ್ಕಿಂತ ಹೆಚ್ಚಿನ ನಂಬರನ್ನು ತೆಗೆದುಕೊಂಡಿರಬೇಕೆಂದು ಹೇಳುತ್ತಾರೆ. ಆದರೆ ಕೇವಲ ಬಡತನದಲ್ಲಿರುವವರು ಓದಿ ಹೆಚ್ಚಿನ ಮಟ್ಟವನ್ನು ಗಳಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಲ್ಲ. ಖೋತಾ ಬಡ್ಜೆಟ್ ಆಗಿದೆ. ಹೆಚ್ಚಿನ ತೆರಿಗೆ ಹಾಕಿ ಹಣವನ್ನು ವಸೂಲಿ ಮಾಡುತ್ತೇವೆ ಎಂದು ಹೇಳುತ್ತಾರೆ. ಇಂಥವರು ರಾಮರಾಜ್ಯವನ್ನು ಕಟ್ಟುತ್ತೇವೆಂದು ಹೇಳುತ್ತಿದ್ದಾರೆ!

ಕೋರ್ಟುಗಳ ಸಂಬಂಧವಾಗಿ ಹೇಳುವುದಾದರೆ, ಮೊನ್ನೆ ನಾನು ತುಮಕೂರಿನಲ್ಲಿ ಕೋರ್ಟಿಗೆ ಹೋಗಿದ್ದೆ, ಅಲ್ಲಿ ಪ್ರೋಸೆಸ್ ಸರ್ವ್ ಮಾಡುವುದಕ್ಕೆ ಬೇಕಾದ ಷೀಟುಗಳನ್ನು ಒದಗಿಸಿಲ್ಲ, ರೀಫಂಡ್ ಫಾರಂಗಳಿಲ್ಲ. ಜನರು ತೊಂದರೆ ಪಡುತ್ತಿದ್ದಾರೆ. ಜನರಿಗೆ ಬರಬೇಕಾದ ಪರಿಹಾರವನ್ನು ತೆಗೆದುಕೊಳ್ಳಲು ಸರಿಯಾದ ಏರ್ಪಾಡು ಮಾಡಿಲ್ಲ. ರೈತನ ಜಮೀನನ್ನು ವಶಮಾಡಿಕೊಳ್ಳುತ್ತಿದ್ದಾರೆ, ಅದಕ್ಕೆ ಕೊಡಬೇಕಾದ ಸೂಕ್ತ ಪರಿಹಾರವನ್ನು ಹತ್ತಾರು ವರ್ಷಗಳಾದರೂ ಸರ್ಕಾರದವರು ಕೊಡುತ್ತಿಲ್ಲ. ಹೀಗಿರುವಾಗ ಹತ್ತಾರು ಕೋಟಿ ರೂಪಾಯಿಗಳ ಯೋಜನೆಗಳನ್ನು ಮಾಡುತ್ತೇವೆ, ಚಿನ್ನದ ನಾಡಾಗುತ್ತದೆ ಎಂದು ಹೇಳುತ್ತಾರೆ. ಸರ್ಕಾರದವರು ಮಾಡತಕ್ಕ ಆಜ್ಞೆಗಳ ವಿರೋಧವಾಗಿ ಅನೇಕರು ಕೋರ್ಟಿಗೆ ಹೋಗಿ ಇವರ ಆಜ್ಞೆಗಳು ರದ್ದಾಗುತ್ತಿದ್ದರೂ ನಾಚಿಕೆಯಿಲ್ಲದೆ ಅಧಿಕಾರವನ್ನು ಮುಂದುವರಿಸಿಕೊಂಡು ಬಂದು ಮಂತ್ರಿಮಂಡಲವನ್ನು ವಿಸ್ತಾರ ಮಾಡುತ್ತೇವೆ, ಇದಕ್ಕಾಗಿ ಕಾರ್ಖಾನೆಯನ್ನಿಟ್ಟಿದ್ದೇವೆಂದು ಅಧಿಕಾರದಲ್ಲಿ ಕುಳಿತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಂಥ ಕಾರ್ಖಾನೆಯೆಂದು ಅದರ ಹೆಸರು ಹೇಳಿ?

ಶ್ರೀ ಕೆ. ಲಕ್ಕಪ್ಪ.—ಮಂತ್ರಿಗಳನ್ನು ತಯಾರು ಮಾಡುವ ಕಾರ್ಖಾನೆ. (ನಗು!)

ನಮ್ಮ ಕಡೆ ಒಂದು ಸೊಸೈಟಿ ಎಂದು ಮಾಡಿ ಐನೂರು ರೂಪಾಯಿ ಡಿಪಾಜಿಟ್ ಮಾಡಿದರೆ ಸಾವಿರಾರು ರೂಪಾಯಿಗಳ ಆಡಳಿತ ವ್ಯವಹಾರ ನಡೆಸಬಹುದು. ಇದನ್ನು ಸರ್ಕಾರ ನೋಡುವಹಾಗೆಯೇ ಇಲ್ಲ. ಯಾರ ಹೆಸರನ್ನೊ ಫೋರ್ಜರಿ ಮಾಡಿ ಹಣ ಪಡೆಯಲು ಅವಕಾಶ ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಇಂಥ ಅನೇಕ ಕೇಸುಗಳು ರಿಜಿಸ್ಟರಾಗಿವೆ. ಆದರೂ ಇಂಥಾದ್ದೇನೂ ನಡೆಯುತ್ತಿಲ್ಲವೆಂದು ಹೇಳುತ್ತಾರೆ. ಅವಿದ್ಯಾವಂತರಿರುವ ಹಳ್ಳಿಗಳಿಗೆ ಹೋಗಿ ಸಹಕಾರ ಪದ್ಧತಿಯನ್ನು ಆಚರಣೆಗೆ ತರುತ್ತೇವೆಂದು ಹೇಳಿ, ಅಲ್ಲಿ ಫೋರ್ಜರಿ, false impersonation, ಕಳ್ಳಭಟ್ಟಿ ಸಾರಾಯಿ ತಯಾರಿಕೆ ಇವೆಲ್ಲವೂ ಹತೋಟಿಯಿಲ್ಲದೆ ನಡೆಯುವ ಆಡಳಿತ ನಡೆಸುತ್ತಿದ್ದಾರೆ. ಇದನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಈ ವಿಚಾರದಲ್ಲಿ ಸರ್ಕಾರ ಬಹಳ ಎಚ್ಚರಿಕೆಯಿಂದ ವರ್ತಿಸಿ ದಕ್ಷ ಆಡಳಿತಗಾರರನ್ನು ನೇಮಕ ಮಾಡಿ, ಸಮಾಜಘಾತುಕರನ್ನು ಬಲಿಹಾಕತಕ್ಕ ವ್ಯವಸ್ಥೆ ಮಾಡಿ ಅಧಿಕಾರವನ್ನು ನಡೆಸಬೇಕೆಂದು ಕಳಕಳಿಯಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಅರಣ್ಯಶಾಖೆಯ ಮಂತ್ರಿಗಳು).—ಸಹಕಾರ ಸಂಸ್ಥೆಗಳಲ್ಲಿ ಹಣ ತಿಂದವರ ಮೇಲೆ ಕೇಸುಗಳನ್ನು ಹಾಕಿದ್ದೇವೆ. ಯಾರು ಹಣ ತಿಂದಿದ್ದಾರೋ ಅವರಿಗೆ ತಕ್ಕ ಶಿಕ್ಷೆ ಮಾಡುತ್ತಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಹಣವನ್ನು ಸಂಪಾದನೆ ಮಾಡುತ್ತೇವೆಂದು ಲಕ್ಷಾಂತರ ರೂಪಾಯಿ ಬಂಡವಾಳ ಎಲ್ಲೆಲ್ಲೋ ಹಾಕುತ್ತಿದ್ದಾರೆ. ತುಮಕೂರಿನ ಹತ್ತಿರ ಬೆಳ್ಳಾವಿ ಗ್ರಾಮದಲ್ಲಿ cycle spare parts ತಯಾರು ಮಾಡುತ್ತೇವೆಂದು ಹೇಳಿದವರಿಗೆ ಲಕ್ಷಾಂತರ ರೂಪಾಯಿ ಕೊಟ್ಟಿದ್ದಾರೆ. ಆತನಿಗೇನೂ ಭೂಮಿಯಿಲ್ಲ, ಬೇರೆ ಆಸ್ತಿಯೂ ಇಲ್ಲ. ಹೀಗಿದ್ದರೂ ಯಾವ ಆಧಾರದ ಮೇಲೆ ಯಾವ ಖಾತರಿಯ ಮೇಲೆ ಕೊಟ್ಟಿದ್ದಾರೋ ಗೊತ್ತಿಲ್ಲ. ಅವನು ಹಾಕುವುದು ಖಾದಿ ಜುಬ್ಬ, ಬಿಳಿಯ ಟೋಪಿ. ಆರು ಸಾವಿರ ರೂಪಾಯಿನ ನಿಕ್ಕಲ್ ಬಂದಿರುವುದನ್ನು ಆತ ಬ್ಲಾಕ್ ಮಾರ್ಕೆಟ್‌ನಲ್ಲಿ ಹನ್ನೆರಡು ಸಾವಿರಕ್ಕೆ ಮಾರಿಕೊಂಡಿದ್ದಾನೆ. ಇದಕ್ಕೆ ಬೇಕಾದರೆ ನಾನು ಸಾಕ್ಷ್ಯ ಒದಗಿಸುತ್ತೇನೆ.

ಹರಳೂರು ಸೊಸೈಟಿಯಲ್ಲಿ ಮೂರು ಲಕ್ಷ ರೂಪಾಯಿ ದುರುಪಯೋಗವಾಗಿದೆ. ಹನ್ನೊಂದು ಹಳ್ಳಿಗಳಲ್ಲಿರುವ ಪ್ರಜೆಗಳಿಂದ ಹೆಬ್ಬೆಟ್ಟು ಒತ್ತಿಸಿಕೊಂಡು ಸೊಸೈಟಿಗೆ ಹಣವನ್ನು ತಂದಿದ್ದಾರೆ. ಇದರಲ್ಲಿ ಸೇರಿರುವವರು ದೊಡ್ಡ ವ್ಯಕ್ತಿಗಳು. ಗ್ರಾಮ ಕೈಗಾರಿಕೆಯೆಂದು ಪ್ರಾರಂಭಮಾಡಿದ್ದಾರೆ. ನಮ್ಮ ದೇಶದಲ್ಲಿ ಆದಾಯ ಯಾವುದರಲ್ಲಿ ಬರುತ್ತದೆಂಬುದನ್ನು ನೋಡದೆ ಕೈಗಾರಿಕೆ ನಡೆಸಿದರೆ ಅದರಿಂದ ಲಾಭ ಬರಲು ಸಾಧ್ಯವೆ ಎಂಬುದನ್ನು ಯೋಚನೆ

(ಶ್ರೀ ಕೆ. ಲಕ್ಕಪ್ಪ)

ಮಾಡಬೇಕು. ಲಾಳದ ಕಂಪೆನಿ ಎಂದು ಒಂದು ಕೈಗಾರಿಕೆ ಸಂಸ್ಥೆಗೆ ಮೂರು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆತನಿಗೇನೂ ಆಧಾರವಿಲ್ಲ. ಖಾದಿ ಜುಬ್ಬ ಬಿಳಿ ಟೋಪಿ ಹಾಕುತ್ತಾನೆ. ನಾಗವಲ್ಲಿಯ ಹತ್ತಿರ ಇದ್ದಾರೆ.

ಸ್ವಾಮಿ, 27 ಜನ ಮಂತ್ರಿಗಳಿದ್ದರೂ ಇಬ್ಬರು ಮೂರು ಜನರೂ ಈ ಸಭೆಯಲ್ಲಿ ನಮ್ಮ ಮುಂದೆ ಕಾಣುತ್ತಿಲ್ಲ. ಅರ್ಧದಷ್ಟು ಜನ ಮಂತ್ರಿಗಳಾದರೂ ಈ ಸಭೆಯಲ್ಲಿರಬೇಡವೆ? ನಾವೇನಾದರೂ ಆಡಳಿತ ದಲ್ಲಿರುವ ಲೋಪದೋಷಗಳನ್ನು ಹೇಳಿದರೆ ಅವರು ಬರೆದುಕೊಂಡು ಏನಾದರೂ ತನಿಖೆ ಮಾಡಬಹುದು. ಹಣ ಹೆಚ್ಚು ಉತ್ಪತ್ತಿಮಾಡುತ್ತೇವೆ, ಕೈಗಾರಿಕಾಭಿ ವೃದ್ಧಿ ಮಾಡುತ್ತೇವೆ, ರೈತರಿಗೆ ಅನುಕೂಲ ಮಾಡು ತ್ತೇವೆ ಎಂದು ಹೇಳಿ ಇಂಥ ಹಗಿನ ವ್ಯಾಪಾರ ಮಾಡುವುದಕ್ಕೆ ನಿಂತರೆ ಖೋತಾ ಬಡ್ಜೆಟ್ ಆಗದೆ ಇನ್ನೇನಾದೀತು? ನಮ್ಮ ದೇಶದಲ್ಲಿ ವಿದ್ಯೆ ಹೆಚ್ಚಾಗ ಬೇಕು, ಸಂಸ್ಕೃತಿ ಬೆಳೆಯಬೇಕು, ಹಳ್ಳಿಗಳಲ್ಲಿ ಪ್ರತಿ ಯೊಬ್ಬರೂ ವಿದ್ಯಾವಂತರಾಗಬೇಕು ಎಂದು ಹೇಳು ವುದು, ಸ್ಕೂಲು ಫೀಜನ್ನು ಹೆಚ್ಚು ಮಾಡುವುದು! ಇಷ್ಟು ಫೀಜನ್ನು ಹೆಚ್ಚು ಮಾಡಿದರೆ ಬಡವರಿಗೆ ವಿದ್ಯೆ ಕಲಿಸಲು ಸಾಧ್ಯವೆ? ಇದನ್ನು ಸರ್ಕಾರ ಯೋಚನೆ ಮಾಡಿದ್ದಾರೆಯೆ? ಅವರು ಇದನ್ನೆಲ್ಲಾ ಕಣ್ಣು ಬಿಟ್ಟು ನೋಡಬೇಕು.

ನೂರಹನ್ನೊಂದು ಜನ ಹಂಗಾಮಿ ಲೆಕ್ಚರರುಗಳ ಅರಣ್ಯರೋದನವನ್ನು ನೋಡುವುದಕ್ಕಾಗುವುದಿಲ್ಲ. ಐದಾರು ವರ್ಷ ಸರ್ವಿಸ್ ಮಾಡಿ, ಅನುಭವ ಪಡೆದು, ಅವರು ಮತ್ತೆ 150 ರೂಪಾಯಿ ಸಂಬಳಕ್ಕೆ ಇಳಿಯ ಬೇಕಾಗಿದೆ. ಅವರು ಕೇಳಿಕೊಂಡರೆ, ನೀವು ಇದ್ದರೆ ಇರಬಹುದು, ಇಲ್ಲದಿದ್ದರೆ ಹೋಗಬಹುದು ಎಂದು ಸರ್ಕಾರದವರು ಹೇಳುತ್ತಾರೆ. ವಿದ್ಯೆ ಹೆಚ್ಚು ಮಾಡು ತ್ತೇವೆ, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಸರ್ಕಾರ ಹೇಳುತ್ತಾರೆ. ಹೀಗಿರುವಾಗ ಜನರು ಎಂ.ಎ., ಎಂ.ಎಸ್‌ಸಿ. ಮಾಡಿಕೊಂಡು ಬೀದಿಯ ಭಿಕಾರಿ ಗಳಾಗಿ ಅಲೆಯುತ್ತಿದ್ದಾರೆ, ಇವರಿಗೆ ಏನು ಉದ್ಯೋಗ ಕಲ್ಪಿಸಿದ್ದಾರೆ? ಸರ್ಕಾರ ಇದಕ್ಕೆ ತೀವ್ರ ಗಮನ ಕೊಡ ದಿದ್ದರೆ ಯಾರಲ್ಲಿ ಹೋಗಿ ಹೇಳಿಕೊಳ್ಳಬೇಕು? ಈ ವಿಚಾರವನ್ನು ಇಲ್ಲಿ ಕೇಳಿದಾಗ ಶ್ರೀಮಾನ್ ಕಂಠಿಯ ವರು ಬಹಳ ಲಘುವಾಗಿ ಮಾತನಾಡಿದರು. ಈ ವಿಚಾರದಲ್ಲಿ ಹೀಗೆ ಮಾಡುತ್ತೇವೆಂದು ಹೇಳಿದವರು ಆ ರೀತಿ ಮಾಡಿ ಸೂಕ್ತ ಪರಿಹಾರ ನೀಡಿಲ್ಲ. ಇವೊತ್ತಿನ ದಿವಸ ವಿದ್ಯಾವಂತರ ಸಂಖ್ಯೆ ಜಾಸ್ತಿಮಾಡಿ ನಿರು ದ್ಯೋಗಸ್ಥರನ್ನು ಜಾಸ್ತಿ ಮಾಡುತ್ತಿರುವ ಸರ್ಕಾರ ನಮ್ಮ ದೇಶದಲ್ಲಿ ಆಡಳಿತ ನಡೆಸಲು, ಇರಲು ಸಾಧ್ಯವೆ ಎಂದು ಪ್ರಶ್ನೆ ಮಾಡಬೇಕಾಗಿದೆ.

ಒಂದು ಕಡೆ ಕಾಂಗ್ರೆಸ್ಸಿಗೆ ಬಹುಮತವಿದೆ ಯೆನ್ನು ವಂತೆ ಬಡವರು ಜಾಸ್ತಿಯಾಗುತ್ತಿದ್ದಾರೆ. ಮತ್ತೊಂದು ಕಡೆ ಶ್ರೀಮಂತರು ಶ್ರೀಮಂತರೇ ಆಗುತ್ತಿದ್ದಾರೆ. ಬಾಯಲ್ಲಿ ಮಾತ್ರ ಸಮಾಜವಾದ ವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಿ ದ್ದಾರೆ. ಹಾಗಿರುವಾಗ ರಾಗಿಯನ್ನು ಕಮರ್ಷಿಯಲ್ ಕ್ರಾಪ್ ಎಂದು ಎಲ್ಲಾದರೂ ಹೇಳುವುದುಂಟೇ? ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಿರು ವಾಗ ಅವರಿಗೆ ಅವಶ್ಯಕವಾಗಿ ಬೇಕಾದ ರಾಗಿಯನ್ನು ಕೂಡ ಕಮರ್ಷಿಯಲ್ ಕ್ರಾಪ್ ಎಂದು ಡಿಕ್ಲೇರ್ ಮಾಡುವರೆಂದು ಪತ್ರಿಕೆಗಳಲ್ಲಿ ಬಂದಿದೆ. ಹೀಗೆ ಮಾಡಿ ಬಡವರ ಅಹಾರಕ್ಕೂ ತೆರಿಗೆ ಹಾಕುತ್ತಿದ್ದಾರೆ. ಜನ ಜೀವನಮಟ್ಟವನ್ನೇನಾದರೂ ಹೆಚ್ಚಿಸಿದ್ದಾರೆಯೇ, ಅನಕ್ಷರತೆಯನ್ನು ಹೋಗಲಾಡಿಸಿದ್ದಾರೆಯೆ ಎಂದರೆ ಅದೂ ಇಲ್ಲ.

ಈಗ ಮಂತ್ರಿಗಳ ಸಂಖ್ಯೆ ಜಾಸ್ತಿಯಾದರೂ ಪರವಾ ಗಿಲ್ಲ, ಸಂಬಳವಾದರೂ ಕಡಮೆ ಮಾಡಿ ಕೊಂಡರೆ ಒಳ್ಳೆಯದು. ಅದಕ್ಕಾದರೂ ಈ ಸಭೆಯಲ್ಲಿ ಭರವಸೆ ಕೊಡಲಿ. ಒಬ್ಬೊಬ್ಬರಿಗೆ 500 ರೂಪಾಯಿಗಳನ್ನಾ ದರೂ ಕೊಡುವಂತೆ ಮಾಡಿದರೆ ಒಳ್ಳೆಯದು. ಹೀಗಾ ದರೂ ಮಾಡಿದರೆ ಕೊಂಚ ಉಳಿತಾಯವಾಗುತ್ತದೆ. ಇದಕ್ಕಾದರೂ ಇವೊತ್ತಿನ ದಿವಸ ಮನಸ್ಸು ಮಾಡಿದ್ದಾ ರೆಯೆ ಎಂದು ಕೇಳುತ್ತಿದ್ದೇನೆ.

ಇನ್ನು ಹೆಂಡದ ಖಾತೆ ನೋಡಿದರೆ ಒಂದು ಕಡೆ ಹೆಂಡ ಕುಡಿಯದಂತೆ ನಿರ್ಬಂಧ ಮಾಡಿ ಇನ್ನೊಂದು ಕಡೆ ಅವಕಾಶ ಕೊಟ್ಟಿದ್ದಾರೆ, ನೆಲಮಂಗಲದಲ್ಲಿ ಒಂದು ಕಡೆ ಕುಡಿಯುವಂತಿಲ್ಲ, ಇನ್ನೊಂದು ಕಡೆ ಪೋಲಿಸರ ಮುಂದೆಯೇ ಕುಡಿಯುತ್ತಾರೆ. ಮಹಾತ್ಮಗಾಂಧಿ ಯವರ ತತ್ವವನ್ನು, ಒಳ್ಳೆಯ ನೀತಿಯನ್ನು ಅನುಷ್ಠಾ ನಕ್ಕೆ ತರುವುದಾಗಿ ಹೇಳುತ್ತಿದ್ದಾರೆ. ಆದರೆ ಸರ್ಕಾರದ ಮುಂದೇ ಕುಡಿಯುತ್ತಿದ್ದಾರೆ. ಈ ಸಂಬಂಧದಲ್ಲಿ ಅನುಸರಿಸುತ್ತಿರುವ ನೀತಿ ಸರಿಯಾಗಿಲ್ಲ.

ವಯಸ್ಕರ ಶಿಕ್ಷಣದ ವಿಚಾರವಾಗಿ ಒಂದು ಪ್ರಶ್ನೆ ಬಂದಿತ್ತು. ಯಾವ ಊರಿನಲ್ಲೂ ಅದು ಸರಿಯಾಗಿ ಚಲಾವಣೆಯಲ್ಲಿರುವಂತೆ ಕಾಣಲಿಲ್ಲ. ಇದರಿಂದ ಸೇಕಡ ಎಷ್ಟು ಮಂದಿಗೆ ವಿದ್ಯಾಭ್ಯಾಸ ಮಾಡಿಸಿದ್ದೀ ರೆಂದು ಕೇಳಿದರೆ ಸರ್ಕಾರದ ಉತ್ತರ ಹೇಳಲಿಲ್ಲ. ಇದಕ್ಕಾಗಿ ಬೇಕಾದಷ್ಟು ಹಣ ಖರ್ಚುಮಾಡಿದ್ದಾರೆ. ಆದರೆ ಈ ಯೋಜನೆ ಯಶಸ್ವಿಯಾಗಿದೆಯೇ? ಹೀಗೆ ತಲೆ ಕೆಳಗಾಗಿರುವ ಯೋಜನೆಗಳನ್ನು ಮಾಡುತ್ತಿದ್ದರೆ ದೇಶದಲ್ಲಿ ಹಣ ಉಳಿಯಲು ಸಾಧ್ಯವೆ? ಖೋತಾ ಬಡ್ಜೆಟ್ ಆಗುವುದು ತಪ್ಪುತ್ತದೆಯೇ? ಸೇಕಡ 80 ಮಂದಿ ಇರುವ ರೈತರು ಬದುಕುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು. ಈಗ ಮೂರು ಕೋಟಿ ರೂಪಾಯಿ ತೆರಿಗೆ ಹಾಕುವುದಾಗಿ ಹೇಳುತ್ತಿ ದ್ದಾರೆ. ಈಗಲಾದರೂ ಈ ಮಂತ್ರಿಮಂಡಲ ನಿಜ ವಾಗಿಯೂ ಸಮಾಜವಾದವನ್ನು ಜಾರಿಗೆ ತರುತ್ತ ದೆಯೆ ಎಂಬ ಬಗ್ಗೆ ಆಶ್ವಾಸನೆ ಕೊಡಲಿ. ಇಲ್ಲದಿದ್ದರೆ ಇದು ಅಧಿಕಾರದಲ್ಲಿರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಕಲ್ಲೂರ್ ಉರುಫ್ ವಾಲಿ ಚನ್ನಪ್ಪ ಶಂಕರಪ್ಪ (ಸಂಪಗಾವ್).—ಸ್ವಾಮಿ, ಈಗ ನಮ್ಮ ಮುಂದಿರುವ ಹಣಕಾಸಿನ ಪಟ್ಟಿಯನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಹೇಳುತ್ತೇನೆ. ವಿರೋಧಿ ಪಕ್ಷ ಟೀಕೆ ಮಾಡುವುದು ವಾಡಿಕೆ. ನಾನೀಗ 10-20 ವರ್ಷ ಗಳ ಅನುಭವದ ಮೇಲೆ ಕೆಲ ವಿಚಾರಗಳನ್ನು ತಮ್ಮ ಮುಂದೆ ಹೇಳಬೇಕಾದ ಪ್ರಸಂಗವಿದೆ. ಈಗೇನೋ ಒಂದು ಪಾನ ಪ್ರತಿಬಂಧಕ ಬೋರ್ಡ್ ಇದೆ. ಅದು ಒಳ್ಳೆಯದು. ಕೆಲವರು ಸ್ವರಾಜ್ಯ ದೊರಕಿಸಿ ಕೊಳ್ಳಲು ಪ್ರಯತ್ನಪಟ್ಟಾಗ ಸತ್ಯಾಗ್ರಹ ಹೂಡಿ ಜೈಲಿಗೆ ಹೋಗಬೇಕಾಯಿತು. ಈಗ ಪಾನನಿರೋಧ ವಿದ್ದರೂ ಕದ್ದು ಕುಡಿಯುವುದು, ತಯಾರಿಸುವುದು ಇದ್ದೇ ಇದೆ. ನಾವು ರಚನಾತ್ಮಕ ಕಾರ್ಯ ಮಾಡುವ ವರೆಗೂ ಕುಡಿಯುವುದನ್ನು ತಡೆಗಟ್ಟಲು ಸಾಧ್ಯವಿಲ್ಲ. ಕುಡಿತ, ತಯಾರಿಸುವಿಕೆ, ವಗೈರೆಯಲ್ಲಿ ನಿರತರಾಗಿರು ವವರಿಗೆ ಅದನ್ನು ಬಿಟ್ಟು ಬೇರೆ ಕಸಬನ್ನು ಅವಲಂಬಿಸು ವಂತೆ ಅವರಿಗೆ ಹೊಲ ಕೊಟ್ಟು ಅಥವಾ ಯಾವುದಾ ದರೂ ಕೈಗಾರಿಕೆ, ಉದ್ಯೋಗ ಕಲ್ಪಿಸಿ ಕೊಟ್ಟು ಜೀವ

ನೋಪಾಯಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾದೀತು. ಸಣ್ಣ ಜನರು ಒಂದು ರೀತಿ ಪಾನವನ್ನು ಕುಡಿದರೆ ದೊಡ್ಡವರು ವಿಸ್ಕಿ ತರಿಸಿ ಕುಡಿಯುತ್ತಾರೆ. ಮುಖ್ಯವಾಗಿ ಸಣ್ಣ ಜನರಿಗೆ ಉದ್ಯೋಗ ಒದಗಿಸಬೇಕು. ಈಗೇನೋ ಪೋಲೀಸರಿಗೆ ಪಾನದ ಸಂಬಂಧವಾದ ತಪ್ಪಿತಸ್ಥರನ್ನು ಹಿಡಿಯಲು ಅಧಿಕಾರ ಕೊಟ್ಟಿದ್ದಾರೆ. ಆದರೆ ಈಗ ಅವರಿಗೆ ಫಾಯಿದೆ ಜಾಸ್ತಿಯಾಗುತ್ತಿದೆ. ಶಾಸನ ಸಭೆಯ ಸದಸ್ಯರು ಯಾರಾದರೂ ಕುಡಿಯುತ್ತಾರೆಂದು ಹೇಳಿದರೆ ತಪ್ಪಿತಸ್ಥರನ್ನು ಹಿಡಿಯದ ಬಿಡುವುದಕ್ಕಾಗುವುದಿಲ್ಲ. ಈಗ ಪೋಲೀಸರು ಹಿಡಿಯಲು ಮುತವರ್ಜಿ ವಹಿಸುತ್ತಾರೆ. ಅದನ್ನು ತಪ್ಪಿಸಿಕೊಳ್ಳಲು ಅಪರಾಧಿ ಹೆಚ್ಚು ಲಂಚ ಕೊಡಲು ಮುಂದೆ ಬರುವುದರಿಂದ ಪೋಲಿಸರ ಫಾಯಿದೆ ಇನ್ನೂ ಹೆಚ್ಚುತ್ತಿದೆ. ಕುಡಕರನ್ನು ಹಿಡಿಯಲು ಯಾರಾದರು ಸಾಕ್ಷಿ ಹೇಳಿದರೆ, ಅಂಥವರ ಮನೆಗಳಿಗೆ ಬೆಂಕಿ ಹಚ್ಚುವುದು, ಬಣವೆ ಸುಡುವುದು, ಬೆಳೆ ನಷ್ಟಗೊಳಿಸುವುದು ಮುಂತಾದ ಕಾರ್ಯಗಳಲ್ಲಿ ನಿರತರಾಗುತಾರೆ. ಇದನ್ನು ತಪ್ಪಿಸಲು ಜನರು ಹಿಂದೆ ಮುಂದೆ ನೋಡುತ್ತಾರೆ. ಕಸಬುಗಳಲ್ಲಿ ನಿರತರಾಗಿದು ಈಗ ನಿರುದ್ಯೋಗಿಗಳಾಗುತ್ತಿರುವವರಿಗೆ ಕೆಲಸ ದೊರೆಯುವಂತೆ ಮಾಡಿ ಬೇಕಾದ ಸೌಕರ್ಯ ಕಲ್ಪಿಸಿಕೊಡಬೇಕು. ಈಗ ಮಹಾರಾಷ್ಟ್ರದ ಗಡಿಯಲ್ಲಿ ಕನ್ನಡಿಗರಿಗೆ ತೊಂದರೆಯಿದೆ.

5-00 P.M.

[MR. DEPUTY SPEAKER in the Chair]

ಕನ್ನಡ ಜನರ ಮಾಟಿಂಗಿನಲ್ಲಿ ಮರಾಠಿಗಳು ಕಲ್ಲು ತೂರುವುದು ಮತ್ತು ಸಗಣಿ ತೂರುವುದು ಇವುಗಳಿಗಾಗಿ ಸರಕಾರವು ಇದನ್ನು ತಪ್ಪಿಸಿಕೊಳ್ಳಲಿಕ್ಕೆ ಎಷ್ಟೋ ಖರ್ಚುಮಾಡುತ್ತಿದ್ದೆವು. ಅಷ್ಟೆಲ್ಲಾ ಕಷ್ಟಪಟ್ಟು ನಮಗೆ ಈಗ ಏನಾಗಿದೆ! ಇಪ್ಪತ್ತುಸಾವಿರ ಜನ ಸೇರಿ ನಮ್ಮ ಮೇಲೆ ಹಲ್ಲಾ ಮಾಡುತ್ತಿದ್ದಾರೆ. ಅದನ್ನು ನಾವು ಸಹಿಸಿ ಕೊಂಡಿರಬೇಕಾದೆ, ಇದನ್ನೆಲ್ಲಾ ನೋಡಿದರೆ ಪೋಲೀಸ್ ಖಾತೆಯಲ್ಲಿ ಪ್ರಗತಿಯಾದ ಹಾಗಿಲ್ಲ. ಮುಂಚೆ ಹೇಗಿತ್ತೋ ಈಗಲೂ ಹಾಗೆಯೇ ಇದೆ. ಸಂಬಳ ಮಾತ್ರ ಅವರಿಗೆ ಜಾಸ್ತಿಯಾಯಿತು, ಅಷ್ಟೆ. ಆದರೂ ಖೂನಿಕೇಸುಗಳ ಸಂಖ್ಯೆ ಕಡಮೆಯೇನಾದರೂ ಆಗಿದೆಯೇ? ಸರ್ವಸಾಧಾರಣವಾಗಿ ಒಂದು ತಾಲೂಕಿನಲ್ಲಿ ಹತ್ತು ಖೂನಿ ಕೇಸುಗಳಾಗುತ್ತಿವೆ. ಒಂದೇ ದಿನ ಮೂರು ಜನರನ್ನು ಹಗಲಿನಲ್ಲೇ ಹೊಡೆದು ಕೊಂದದುಂಟು. ಒಂದು ತಿಂಗಳಿನಲ್ಲಿ 10-10 ಖೂನಿಯಾದರೆ ಪೋಲೀಸಿನವರ ದಕ್ಷತೆಯನ್ನು ಏನು ಹೇಳಲಿ!

ಶ್ರೀ ಬಿ. ಡಿ. ಜತ್ತಿ.—ಖೂನಿಗಳಾಗುವುದು ಈಗ ಪ್ರಾರಂಭವಾಯಿತೇ ಅಥವಾ ಪರಂಪರಾಗತವಾಗಿ ಅಲ್ಲಿ ಬಂದಿವ್ವೇ?

ಶ್ರೀ ಕಲ್ಲೂರ್ ಉರುಫ್ ವಾಲ ಚನ್ನಪ್ಪ ಶಂಕರಪ್ಪ.—ಅದು ಚನ್ನಮ್ಮನ ನಾಡು, ಮಲ್ಲಮ್ಮನ ನಾಡು, ನಿಜ. ಎಲ್ಲಿ ಅನ್ಯಾಯವಾಗತ್ತದೋ ಅಲ್ಲಿಯೇ ಅದನ್ನು ತೀರಿಸಿ ಬಿಡುತ್ತಾರೆ. ಅದು ಹೇಗೇ ಇರಲಿ. ಪೋಲೀಸಿನವರ ದಕ್ಷತೆಗೆ ಇದು ಕಲಂಕವಾಗಿದೆ. ಇನ್ನು ಮಿಕ್ಕ ಇಲಾಖೆಗಳ ವಿಷಯ ತೆಗೆದುಕೊಂಡರೆ, ಆ ಭಾಗಕ್ಕೆ ಇಲ್ಲಿಯವರೆಗೂ T.D. ಸ್ಕೀಮ್ ಆಗಲಿ, ರಾಷ್ಟ್ರೀಯ ವಿಸ್ತರಣ ಯೋಜನೆಯಾಗಲಿ ಈವರೆಗೂ ತೋರಲ್ಲ. P.W.D. ಮಂತ್ರಿಗಳೇನೋ ತಮ್ಮ ಮತದಾರ ಕ್ಷೇತ್ರದಲ್ಲಿ ಮಾಡಿಕೊಂಡರೇ ಹೊರತು ಮಿಕ್ಕ ಭಾಗಗಳಿಗೆ ಏನು ಸೌಕರ್ಯವನ್ನೂ ಉಂಟು ಮಾಡಲಿಲ್ಲ. ನಮ್ಮ ತಾಲ್ಲೂಕುಗಳಲ್ಲಿ ಒಳ್ಳೆಯ ಜನರ ಇದ್ದಾರೆ. ಅವರಿಗೆ ಏನಾದರೂ ಕೆಲಸವನ್ನು ಕೊಟ್ಟು ಒಳ್ಳೆಯ ಒಕ್ಕಲತನ ಮಾಡುವುದಾಗಲೀ, ಮತ್ತೇನಾದರೂ ಕೈಗಾರಿಕೆಯನ್ನು ಹೆಚ್ಚಿಸುವಲ್ಲಿ ತೊಡಗುವುದಕ್ಕಾಗಲೀ, ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ದೇಶದಲ್ಲಿ ಎಲ್ಲ ಕಡೆಯಲ್ಲೂ T.D. ಬೋರ್ಡ್‌ಗಳು—N.E.S. ಬ್ಲಾಕುಗಳು ಬಂದಿವೆ. ನಮ್ಮ ಕಡೆಯಲ್ಲಿ ಅದರ ಹೆಸರೂ ಇಲ್ಲ, ವಿರೋಧಿ ಪಕ್ಷದವರು ರಿಟ್ ಅರ್ಜಿಯನ್ನು ಸಲ್ಲಿಸಿದ ಮೇಲೆ ಬರಬೇಕಾಗಿದ್ದ ಒಂದು T.D. ಬೋರ್ಡ್ ಕೂಡ ಹೋಯಿತು. ಆಮೇಲೆ ನೀರಾ ಕೇಂದ್ರಗಳನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಅವುಗಳಲ್ಲಿ ೧೨ ಆಣೆ ಭಾಗದಷ್ಟು ಶೇಂದಿ ತಯಾರಾಗಿ ಅದು ಪಟ್ಟಣಕ್ಕೆ ಮಾರಾಟವಾಗಲು ಹೋಗುತ್ತಿದೆ. ಆದ್ದರಿಂದ ಈ ನೀರಾ ಕೇಂದ್ರಗಳನ್ನು ಮುಚ್ಚಿ ಅಲ್ಲಿ ಕೆಲಸ ಮಾಡತಕ್ಕ ಜನರಿಗೆ ಬೇರೆ ರೀತಿಯಲ್ಲಿ ಏನಾದರೂ ಜೀವನ ಸೌಕರ್ಯವನ್ನು ಕಲ್ಪಿಕೊಡಬೇಕೆಂದು ನಾನು ಹೇಳುತ್ತೇನೆ.

ಇದುವರೆಗೆ ನಾನು ಪೋಲೀಸಿನವರ ಮೇಲೆ ಟೀಕೆ ಮಾಡಿದ್ದಕ್ಕೆ ತಾವುಗಳು ಏನೂ ತಿಳಿದುಕೊಳ್ಳ ಕೂಡದು. ಇನ್ನೂ ಹೇಳಬೇಕೆಂದರೆ ಎಷ್ಟೋ ಹೇಳುವುದಿದೆ. ಒಂದಾನೊಂದು ಕಾಲದಲ್ಲಿ ನಾವುಗಳು ಭಾಷಾವಾರು ತಳಹದಿಯ ಮೇಲೆ ಪ್ರಾಂತರಚನೆಯಾಗಬೇಕೆಂದು ಹೇಳಿದ್ದೆವು. ಅಷ್ಟಕ್ಕೆ ಅವರುಗಳು ನಮ್ಮನ್ನು ಜೈಲಿಗೆ ಹಾಕಿದರು. ನಾವು ಕೊನೆಗೆ ಸುಪ್ರೀಂ ಕೋರ್ಟಿಗೆ ಹೋಗಿ ಬಿಡಿಸಿಕೊಂಡು ಬರಬೇಕಾಯಿತು. ನಾವು ದೇಶಕ್ಕೆ ಒಳ್ಳೆಯದನ್ನು ಮಾಡಬೇಕೆಂದಿದ್ದೆವು. ಆದರೂ ಅವರು ನಮ್ಮನ್ನು ಜೈಲಿಗೆ ಹಾಕಿದರು. ಅಂಥವರಿಗೆ ನಾವೇನು ಮಾಡುವುದು? ಸಿ.ಐ.ಡಿ. ಖಾತೆಯವರು, ಲಂಚನಿರ್ಮೂಲ ಖಾತೆಯವರು, ಇವರೆಲ್ಲ ತಮ್ಮ ಕಿಸೆ ತುಂಬಿಕೊಂಡು ಬರೀ ಕಾಗದಪತ್ರ ನಡೆಸುವುದರಲ್ಲಿರುತ್ತಾರೆಯೇ ಹೊರತು ಬೇರೆ ಏನೂ ಮಾಡುವುದಿಲ್ಲ. ಆದ್ದರಿಂದ ಒಳ್ಳೆಯ ದಕ್ಷರಾದ ಜನರನ್ನು ಈ ಇಲಾಖೆಗಳಿಗೆ ಹಾಕಬೇಕು. 1960ರಲ್ಲಿ 763 ಪೋಲೀಸ್ ಸ್ಟೇಷನ್‌ಗಳಿದ್ದುವು. ಈಗ ಪೋಲೀಸ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು ಬೆಳೆದಿದೆಯೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಇದರಿಂದ ಪೋಲೀಸ್ ಇಲಾಖೆಯಲ್ಲಿ ಹೆಚ್ಚಿನ ಪ್ರಗತಿಸಾಧನೆಯಾಗಿದೆಯೆಂದು ಹೇಳಲಾಗದು. ಹೆಚ್ಚಿಗೆ ಪೋಲೀಸ್ ಸಿಬ್ಬಂದಿಯಾಗಿದೆಯೇ ವಿನಾ ಏನೂ ಪ್ರಯೋಜನ ಜನರಿಗೆ ಲಭಿಸಿಲ್ಲ. ಸಿ.ಐ.ಡಿ. ಇಲಾಖೆಯೆಂದು ಸುಳ್ಳು ಇಲಾಖೆಯನ್ನು ಏರ್ಪಡಿಸಿ ವ್ಯಥಾಸಾಮಾನ್ಯ ಜನತೆಯ ಮೇಲೆ ಹೆಚ್ಚಿಗೆ ಹೊರೆಯನ್ನು ಹಾಕಬೇಡಿ. ಇಂಥವುಗಳನ್ನು ಹಚ್ಚ ಮಾಡುವುದಕ್ಕೆ ಬದಲಾಗಿ ಒಕ್ಕಲುತನಕ್ಕೆ, ಕೋ-ಆಪರೇಟಿವ್ ಸೊಸೈಟಿ ಮಾಡಲಿಕ್ಕೆ ಏನಾದರೂ ಸಹಾಯ ಮಾಡಿ. ಈ ಮಂತ್ರಿಮಂಡಳದ ಮೇಲೆ ನಮಗೆ ತುಂಬಾ ವಿಶ್ವಾಸವಿದೆ. ಅವರಿಂದಲೇ ಕರ್ಣಾಟಕ ಪ್ರಾಂತ್ಯಕ್ಕೆ ಒಳ್ಳೆಯದಾಗಬೇಕೆಂದು ಹೇಳ ಬಯಸುತ್ತೇನೆ. ಕರ್ಣಾಟಕವಾಗ ವುದಕ್ಕೆ ನಾವು ಬೆಂಬಲ ಕೊಟ್ಟೆವು. ಇನ್ನು ನಿಮ್ಮಿಂದ ಏನೂ ಮಾಡಲಾಗದಿದ್ದರೆ, ಕರ್ಣಾಟಕಕ್ಕೆ ಮತ್ತೆ ಯಾರೂ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಇರುವ ಈ ಐದು ವರ್ಷಗಳಲ್ಲಿ ನಮ್ಮ ಕರ್ಣಾಟಕಕ್ಕೆ ಏನಾದರೂ ಆದೀತೆಂದು ಭರವಸೆಯಿಂದ ಇದ್ದೇನೆ. ಹಾಗೇನೂ ಆಗದೆ ಇದ್ದರೆ ನಾವು ನಿಮ್ಮನ್ನು ಬಿಟ್ಟು ಮಹಾರಾಷ್ಟ್ರದ ಕಡೆಗೇ ಹೋಗೋಣವೆಂಬ ಭಾವನೆ ಬರುತ್ತದೆ. ಆದ್ದರಿಂದ ಈ ಸರ್ಕಾರ ಬದ್ರವಾಗಿ ಉಳಿದು ಅದಕ್ಕೆ ಯಶಸ್ಸು ದೊರೆಯಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).– ಸ್ವಾಮಿ, ಈ ಮೊದಲೇ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ ಬಡ್ಜೆಟ್ ಅಧಿವೇಶನವೆಂಬುದು ಬಹಳ ಮುಖ್ಯವಾದುದು. ಇಲ್ಲಿ ಒಂದೊಂದು ಲಕ್ಷ ಪ್ರಜೆಗಳನ್ನು ಪ್ರತಿನಿಧಿಸುವ ಜನ ಸೇರಿದ್ದಾರೆ. ನಾನಾ ವಿಷಯಗಳಲ್ಲಿ ತಮ್ಮ ಸಲಹೆಗಳನ್ನು ಅವರು ಸರ್ಕಾರಕ್ಕೆ ಕೊಡಬೇಕಾಗಿರುತ್ತದೆ. ಇಂಥ ಸಂದರ್ಭದಲ್ಲಿ, ಸಂಬಂಧಪಟ್ಟ ಪೋರ್ಟ್‌ಫೋಲಿಯೋ ಮಂತ್ರಿಗಳು ಈ ಸಭೆಯಲ್ಲಿ ಇಲ್ಲದಿದ್ದರೆ ನಮ್ಮ ಭಾಷಣದಿಂದ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ಮುಂದಾದರೂ ಮಾನ್ಯ ಅಧ್ಯಕ್ಷರು ಈ ಬಡ್ಜೆಟ್ ಚರ್ಚೆಯಕಾಲದಲ್ಲಾದರೂ ಎಲ್ಲಾ ಮಂತ್ರಿಗಳೂ ಕಡ್ಡಾಯವಾಗಿ ಈ ಸಭೆಯಲ್ಲಿರುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇದುವರೆಗೂ ಅನೇಕ ಜನ ನನ್ನ ಮಿತ್ರರು ಮಾತನಾಡಿದ್ದಾರೆ. ನಾನಾದರೋ ನನಗಿರುವ ಕಾಲಮಿತಿ ಬಹಳ ಕಡಿಮೆಯಿರುವುದರಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳಿ ಮುಗಿಸುತ್ತೇನೆ.

ಮೊದಲನೆಯದಾಗಿ, ಈಗ ಸರ್ಕಾರದವರು ಟ್ರಾನ್ಸ್‌ಪೋರ್ಟ್ ಮತ್ತು ಪಾನನಿರೋಧ—ಈ ಎರಡು ಬಾಬುಗಳನ್ನೂ ತಮ್ಮ ಕೈಯಲ್ಲೇಕೆ ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಪ್ರತಿನಿತ್ಯವೂ ಅಲ್ಲಿ ಬರತಕ್ಕ ಕಥೆಗಳನ್ನು ಕೇಳಿ ಕಣ್ಣಾರೆಕಂಡು ನಮಗಂತೂ ಬೇಜಾರಾಗಿದೆ. ಎಪ್ಪತ್ತು-ಎಂಬತ್ತು ಮೈಲಿ ಹೋಗತಕ್ಕ ಬಸ್ಸಿನಲ್ಲಿ ನೀವು ಪ್ರಯಾಣ ಮಾಡಿ ನೋಡಿದರೆ ನಿಮಗೇ ಗೊತ್ತಾಗುತ್ತದೆ, ಆ ಕಂಡಕ್ಟರ್ ಮಹಾಶಯನೆಂಬುವನು 30-40 ಜನರಿಗೆ ಟಿಕೆಟ್ಟನ್ನೇ ಕೊಡುವುದಿಲ್ಲ. ಮಧ್ಯೇ ಇನ್ಸ್‌ಪೆಕ್ಟರು ಚೆಕ್ ಮಾಡುವುದಕ್ಕೆ ಬಂದೊಡನೆಯೇ ಅವನನ್ನು ಕುಳ್ಳಿರಿಸಿ ಒಂದು ಪ್ಯಾಕೆಟ್ ಸಿಗರೇಟು ಒಂದು ಪೊಟ್ಟಣದಲ್ಲಿ ಮಾಮೂಲು ಹಣ ಅವನ ಕೈಗೆ ಕೊಟ್ಟುಬಿಡುತ್ತಾನೆ. ನೂರಾರು ಎಲ್ಲಾ ಕೈಗಾರಿಕೆಗಳನ್ನೂ ಸರ್ಕಾರವೇ ಮಾಡ ಬೇಕೆಂದಿರುವಾಗ ಬಸ್ಸುಗಳನ್ನು ಇಟ್ಟುಕೊಂಡು ಹತ್ತಾರು ಜನರಿಗೆ ಆಹಾರ ಕೊಡುವ ವ್ಯವಸ್ಥೆ ಮಾಡಿಕೊಂಡು ಇವರು ಒಂದು ಯೋಜನೆಯನ್ನು ಒಳ್ಳೆಯ ವ್ಯವಸ್ಥಿತವಾದ ರೀತಿಯಲ್ಲಿ ನಡೆಸುವುದಕ್ಕೆ ಏನಾದರೂ ಯೋಚನೆಯನ್ನು ಮಾಡಿದ್ದೀರಾ ?

ಈಗ ಹಾಸನ ಜಿಲ್ಲೆಯಲ್ಲಿ ನೀವು ರೋಡ್ ಟ್ರಾನ್ಸ್‌ಪೋರ್ಟನ್ನು ಮನಾಪಲಿ ಮಾಡಿಕೊಂಡಿದ್ದೀರಿ. ಅಲ್ಲಿ ನೂರಾರು ಜನ ಬಸ್‌ಮಾಲೀಕರು ಹೇಳದೆ ಕೇಳದೆ ಗಾಡಿಗಳನ್ನು ಓಡಿಸುತ್ತಿದ್ದಾರೆಂದೂ ಅವರಿಗೆ ಯಾವೊಂದು ಪ್ರತಿಫಲ ಕೊಡದೇ ಇರುವುದರಿಂದ ಅವರಿಗೆ ತುಂಬಾ ಕಷ್ಟವಾಗಿದೆ. ಬೇರೆ ರೂಟಿನಲ್ಲಿ ನಿಮ್ಮ ಗಾಡಿಗಳನ್ನು ಓಡಿಸಿ ಎಂದು ಅವರಿಗೆ ತಿಳಿಸದೆಯೇ ಇದ್ದಕ್ಕಿದ್ದ ಹಾಗೆಯೇ ಅಲ್ಲೆಲ್ಲಾ ನಿಮ್ಮ ಗಾಡಿಗಳನ್ನೇ ಓಡಿಸುತ್ತಿದ್ದೀರಿ. ಹೀಗಾದರೆ ಅವರ ಗತಿಯೇನು, ಅವರು ಸಾಲ ಸೋಲ ತೀರಿಸುವುದು ಹೇಗೆ, ಅವರಲ್ಲಿ ಕೆಲಸಮಾಡುವ ಜನಗಳಿಗೆ ಅವರು ಯಾವ ರೀತಿ ಜೀವನಕ್ಕೆ ಏರ್ಪಾಡು ಮಾಡಬೇಕು ಎಂಬುದನ್ನು ಸರ್ಕಾರದವರು ಈ ಸಂದರ್ಭದಲ್ಲಿ ಸ್ವಲ್ಪ ಯೋಚನೆಮಾಡಬೇಕು. ಈ ಬಸ್ಸುಗಳಿಗೆ ತಾವು ಹಾಕಿರತಕ್ಕ ಬಂಡವಾಳ, ಅದರ ಮೇಲೆ ಬರತಕ್ಕ ಉತ್ಪತ್ತಿಯನ್ನು ನೋಡಿದರೆ ನೀವು ನಿಜವಾಗಿ ನಮ್ಮ ಕಣ್ಣುಗಳನ್ನು ಕಟ್ಟುವಂತಹ ಮಾತನ್ನು ಆಡುತ್ತಿದ್ದೀರಿ. ಇನ್ನು ಆರು ತಿಂಗಳುಗಳಕಾಲ ಇದೇ ರೀತಿ ನೀವು ನಡೆಸಿದರೆ ನಿಜವಾಗಿಯೂ ಶ್ರೀಮಾನ್ ನಿಜಲಿಂಗಪ್ಪನವರು ಬಂದರು. ಸುಭದ್ರವಾದ ಸರ್ಕಾರವನ್ನು ನಮಗೆ ರಚನೆಮಾಡಿಕೊಡುತ್ತಾರೆ, ಜನಗಳಿಗೆ ಶಾಂತಿ, ಸುಖ ಲಭಿಸುತ್ತದೆ ಎಂದೇನು ಜನ ಆಶೆ ಇಟ್ಟುಕೊಂಡಿದ್ದಾರೋ ಅದೆಲ್ಲಾ ಕನಸಾಗುತ್ತದೆ. ಆದ್ದರಿಂದ ಈಗಲಾದರೂ ಯೋಚನೆ ಮಾಡುವುದಕ್ಕೆ ಎಷ್ಟೋ ಅವಕಾಶವಿದೆ. ಗಾಂಧಿ ಹೆಸರು ಹೇಳತಕ್ಕ ಜನ, ಗಾಂಧಿಪೂಜೆ ಮಾಡತಕ್ಕ ಜನ, ನೀವು ಈ ರೀತಿ ಮಾಡುವುದು ಸರಿಯಲ್ಲ. ನಿಜವಾಗಿ ಗಾಂಧಿಯವರು ಈ ದಿವಸ ಜೀವಂತರಾಗಿದ್ದಿದ್ದರೆ ಏನು ಮಾಡುತ್ತಿದ್ದರೋ ಎಂಬುದನ್ನು ನೀವೇ ಯೋಚನೆ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆತ್ಮಹತ್ಯ ಮಾಡಿಕೊಳ್ಳುತ್ತಿದ್ದರು.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಪ್ರೊಹಿಬಿಷನ್ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಇದೇ ರೀತಿ ಇದ್ದಿದ್ದರೆ ಮಹಾತ್ಮಗಾಂಧಿಯವರು ಮೊದಲು ಇವನ್ನು ತೆಗೆಯಿರಿ ಎಂದು ಹೇಳುತ್ತಿದ್ದರು. ಈ ಪಾನನಿರೋಧ ಜಾರಿಗೆತರುವುದರಲ್ಲಿ ಈಗ ಒಬ್ಬ ಕುಡಿಯುವ ಕಡೆ ಇಪ್ಪತ್ತು ಜನರು ಕುಡಿಯುತ್ತಿದ್ದಾರೆ. ಮನೆಗಳಲ್ಲಿ ಇದು ಗೃಹಕೈಗಾರಿಕೆಯಾಗಿದೆ. ಈ ಯೋಜನೆಗೆ ನಾವು ದುಡ್ಡುಹಾಕಿ ಸಂಪಾದನೆ ಮಾಡೋಣವೆಂದರೆ ಹೇಗೆ ಸಾಧ್ಯವಾಗುತ್ತದೆ? ಬಡ್ಜೆಟ್ ಭಾಷಣದಲ್ಲಿ ಹೇಳಿರುವಹಾಗೆ 42 ಕೋಟಿ ರೂಪಾಯಿಗಳನ್ನು ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಹೊಂದಿಸಬೇಕು. ಪ್ರತಿವರ್ಷವೂ ಸುಮಾರು ಏಳು-ಎಂಟು ಕೋಟಿರೂಪಾಯಿಗಳನ್ನು ಸಂಪಾದನೆ ಮಾಡುವುದಕ್ಕಾಗಿ ಹೊಸ ಹೊಸ ತೆರಿಗೆಗಳನ್ನು ಹಾಕಬೇಕು ಎಂಬುದಾಗಿ ತೀರ್ಮಾನ ಮಾಡಿಕೊಂಡಿದ್ದಾರೆ. ಇತ್ತೀಚೆಗೆ ವಾರ್ನಿಷ್ ಸಹ ಕುಡಿಯುತ್ತಿದ್ದಾರೆ. ಮಿಥಿಲೇಟೆಡ್ ಸ್ಪಿರಿಟ್ ಸಹ ಕುಡಿಯುತ್ತಿದ್ದಾರೆ. ಹೀಗಾಗಿ ನಮ್ಮ ಜನರ ಆರೋಗ್ಯಕ್ಕೆ ತುಂಬಾ ತೊಂದರೆ ಬಂದಿರುವ ಸಮಯದಲ್ಲಿ ಜನರು ದುಡ್ಡನ್ನು ಸಹ ಕಳೆದುಕೊಂಡು ತಮ್ಮ ಒಂದು ಮೊರಾಲಿಟಿಯನ್ನು ಹಾಳುಮಾಡಿಕೊಂಡು ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಜನಗಳಿಗೆ ತಿಳುವಳಿಕೆ ಕೊಟ್ಟು ಕೂಡಲೇ ಈ ಪ್ರೊಹಿಬಿಷನ್ನನ್ನು ತೆಗೆದು ಹಾಕಿ, ಜೊತೆಗೆ ಈ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ತೆಗೆದಷ್ಟು ದೇಶಕ್ಕೆ ಕ್ಷೇಮವಾಗುತ್ತದೆ. ಈಗಾಗಲೇ ನೀವು ಬಸ್ಸುಗಳಲ್ಲಿ ಪ್ರಯಾಣಿಕರ ದರಗಳನ್ನು ಬಹಳ ಜಾಸ್ತಿ ಹಾಕಿದ್ದೀರಿ, ನೀವು ಇದನ್ನು ಪ್ರೈವೇಟ್ ಆಪರೇಟರ್ಸ್ ಕೈಗೆ ಕೊಟ್ಟರೆ ಅವರು ನಿಮಗಿಂತಲೂ ಚೆನ್ನಾಗಿ ನಡೆಸುತ್ತಾರೆ. ನೀವು ಹಾಕಿರತಕ್ಕ ದರಕ್ಕಿಂತ ಕಡಮೆ ದರಹಾಕಿ ಚೆನ್ನಾಗಿ ಓಡಿಸುತ್ತಾರೆ. ನಿಮ್ಮ ಕೈಲಿ ಈ ಇಲಾಖೆ ಇದೆಯೆಂದು ಜಾಸ್ತಿ ಸಂಪಾದನೆ ಮಾಡಬೇಕೆಂದು ಹೋಗಬೇಡ, ಬೇಕಾದರೆ ಅವರ ಮೇಲೆ ಇನ್‌ಕಂಟ್ಯಾಕ್ಸ್, ಸೂಪರ್ ಟ್ಯಾಕ್ಸ್—ಇತ್ಯಾದಿಗಳನ್ನು ಹಾಕಿ ವಸೂಲು ಮಾಡಿಕೊಳ್ಳಿ. ನಿಮಗೆ ಮಾತ್ರ ಈ ಜವಾಬ್ದಾರಿ ಬೇಡಿ, 25 ಜನ ಮಂತ್ರಿಗಳ ಜೊತೆಗೆ ಇನ್ನೂ ಇಪ್ಪತ್ತೈದಾದರೂ ವ್ಯವಸ್ಥೆ ಸರಿಗೊಳಿಸಲಾರಿರಿ. ಬೇಕಾದರೆ ಮಾಡಿಕೊಳ್ಳಿ, ಜನ ಏನೂ ಸುಮ್ಮನಿಲ್ಲ, ಜನ ಕಣ್ಣಿನಲ್ಲಿ ಕಣ್ಣು ಇಟ್ಟುಕೊಂಡು ಇಂತಹ ಅನ್ಯಾಯಗಳನ್ನು ನೋಡುತ್ತಿದ್ದಾರೆ. ಅವನ್ನು ಹೇಗಾದರೂ ಮಾಡಿ ಕಡಮೆ ಮಾಡಬೇಕು. ನಿಮ್ಮ ಈ ಮನಾಪಲಿ ಪದ್ಧತಿ ಹೋಗಲಿ ಎಂದು ನಾನು ಸಲಹೆ ಮಾಡುತ್ತೇನೆ. ಖಾಸಗೀ ಜನಗಳು ಮಾತ್ರ ಈ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಜೊತೆಗೆ ನೀವು ಯಾವುದಾದರೂ ಬೇರೆ

ಬೇರೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದರೆ ಪ್ರೈವೇಟ್ ಎಂಟರ್‌ಪ್ರೈಸ್‌ನವರಿಗೆ ಸ್ವಲ್ಪ ಸಹಾಯ ವಿರಲಿ. ಈ ಕೋ-ಆಪರೇಟಿವ್ ಎಂಟರ್ ಪ್ರೈಸ್‌ಗಳಲ್ಲಿ ಅನರ್ಥವಾಗುವುದಕ್ಕೆ ಅವಕಾಶವಿದೆ. ಏನಾದರೂ ಸೊಸೈಟಿಗಳು ಅಚ್ಚುಕಟ್ಟಾಗಿ ನಡೆದಿದ್ದೇ ಆದರೆ ಆಗಲೇ ಅವುಗಳನ್ನು ಹಾಳುಮಾಡುವುದಕ್ಕೆ ಬೇಕಾದ ಚಳವಳಿಯನ್ನು ಹೂಡುತ್ತಾರೆ, ಅದು ಆಗದಂತೆ ಪ್ರೈವೇಟ್ ಎಂಟರ್‌ಪ್ರೈಸ್‌ನವರಿಗೆ ಹೆಚ್ಚಿನ ಮಟ್ಟಿಗೆ ಅನುಕೂಲಗಳನ್ನು ಮಾಡಿಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಆಂಟಿಕರಪ್‌ಷನ್ ವಿಚಾರ. ಈ ಹೆಸರು ಹೇಳುವುದಕ್ಕೆ ನನಗೆ ಶುದ್ಧ ನಾಚಿಕೆಯಾಗುತ್ತದೆ. ಶ್ರೀರಾಮ, ಹರಿಶ್ಚಂದ್ರರು ಹುಟ್ಟಿದ ದೇಶದಲ್ಲಿ ನಾನು ನಿಮ್ಮ ಮೇಲೆ, ನೀವು ನನ್ನ ಮೇಲೆ ಹೀಗೆ ನಮ್ಮ ನಮ್ಮಲ್ಲೇ ಒಬ್ಬನನ್ನು ಕಾವಲು ಹಾಕತಕ್ಕ ಪರಿಸ್ಥಿತಿ ಇದೆಯೋ ಅದು ಶುದ್ಧ ನಾಚಿಕೆಗೇಡು. ಇದರಿಂದ ಅವರು ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿದ್ದಾರೆಯೇ ಅಂದರೆ ಇತ್ತೀಚೆಗೆ ಮಾಮೂಲು ಅವರೇ ಕೇಳುವುದು ಜಾಸ್ತಿಯಾಯಿತು. ಇದರಿಂದ ಮಾಮೂಲೇನೂ ಕಡಮೆಯಾಗಲಿಲ್ಲ, ಕರಪ್‌ಷನ್ ಅಂತೂ ನಿಲ್ಲಲೇ ಇಲ್ಲ. ಈ ದೇಶ ಇರಬೇಕಾದರೆ ಅಥವಾ ಅಳಿಯಬೇಕಾದರೆ ನಾವು ಮತ್ತು ನಮ್ಮ ಜನರೇ ಕಾರಣರಾಗಿರಬೇಕಾಗುತ್ತದೆ. ಎಲ್ಲಿಯ ವರೆಗೆ ನಾವು ಸತ್ಯಶೀಲರಾಗಿರುವುದಿಲ್ಲವೋ ಅಲ್ಲಿಯವರೆಗೂ ಭಗವಂತನನ್ನು ಒಲಿಸಲಾರೆವು ಎಂಬುದನ್ನು ಮನಗಾಣಬೇಕು. ಒಂದು ಪಕ್ಷ ಈ ದೇಶಕ್ಕೆ ಕೆಟ್ಟ ಹೆಸರು ತರುವುದಾದರೆ ಅದರ ಜವಾಬ್ದಾರಿ ಈ ದೇಶದ ಪ್ರತಿಯೊಬ್ಬ ಪ್ರಜೆಯ ಮೇಲೂ ಇರುವುದರಿಂದ ನಾನೇ ಒಬ್ಬನ ಮೇಲೆ ಇನ್ನೊಬ್ಬನನ್ನು ಕಾವಲು ಹಾಕುವುದರಿಂದ ವಿಪರೀತ ಅನರ್ಥಕ್ಕೆ ಎಡೆ ಕೊಟ್ಟಂತಾಗುತ್ತದೆ. ಆದಷ್ಟುಬೇಗ ಇಂಥಾದ್ದನ್ನೆಲ್ಲಾ ನಿಲ್ಲಿಸಿದರೆ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ. ನಾನು ಮಂಡ್ಯ ಜಿಲ್ಲೆಯಿಂದ ಬಂದಿರುವವನು. ಅಲ್ಲಿ ಹೆಚ್ಚಿಗೆ ಬೆಳೆ ಬೆಳೆಯಲು ಪ್ಯಾಕೇಜ್ ಡೀಲ್ ಎಂಬ ಒಂದು ಯೋಜನೆಯನ್ನು ತಂದಿದ್ದಾರೆ. ಅದು ಬಂದು ಈಗ ಸ್ವಲ್ಪ ದಿವಸಗಳೇ ಆಗಿದೆ. ಮೊನ್ನೆ ನಡೆದ ಚುನಾವಣೆ ಶಾಖವೋ ಏನೋ ತಿಳಿಯದು. ಈ ಪ್ಯಾಕೇಜ್ ಡೀಲ್ ವಿಷಯಗಳನ್ನು ಚೆನ್ನಾಗಿ ತಿಳಿದಂತಹ ಅಧಿಕಾರಿಗಳನ್ನು ಒಂದೇ ದಿವಸದಲ್ಲಿಯೇ ಅಲ್ಲಿಂದ ತೆಗೆದು ಹಾಕಿದ್ದಾರೆ. ಇದನ್ನು ತಿಳಿದು ನಾನು ರೆವಿನ್ಯೂ ಮಂತ್ರಿಗಳನ್ನು, ಏನುಸ್ವಾಮಿ ಹೀಗೆಮಾಡಿದಿರಿ ಎಂದು ಕೇಳಿದಾಗ ಏನುಮಾಡುವುದಕ್ಕಾಗುತ್ತದೆ, ನಿಮ್ಮ ಲೀಡರ್ಸ್ ಬಂದು ಹೇಳಿದರು. ಅದಕ್ಕಾಗಿ ಆ ರೀತಿ ಮಾಡಲಾಗಿದೆಯೆಂದು ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರು ಲೀಡರ್ ?

ಶ್ರೀ ಟಿ. ಎನ್. ಮಾದಪ್ಪಗೌಡ.—ಲೋಕಲ್ ಲೀಡರ್ಸ್.

ಶ್ರೀ ಬಿ. ರಾಚಯ್ಯ.—ಅದು ಬೇರೆ ವಿಷಯ, 3 ಜನ ಐ. ಎ. ಎಸ್. ಆಫೀಸರ್ಸ್‌ಗೆ ಒಂದು ಮನೆಯ ವಿಷಯದಲ್ಲಿ ವ್ಯಾಜ್ಯ ಉಂಟಾಗಿ ಈ ಪ್ಯಾಕೇಜ್ ಡೀಲ್ ಬಗ್ಗೆ ಆಫೀಸರ್ಸ್ ಆಡಳಿತ ಜನಗಳಿಗೆ ಬೇಸರವಾದ್ದರಿಂದ ಅವರನ್ನು ಎತ್ತಿ ಹಾಕಿದ್ದಾರೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಹೀಗಾಗಿರುವುದರಿಂದ ಈ ಪ್ಯಾಕೇಜ್ ಡೀಲ್ ಎಂಬುದರಲ್ಲಿ ತರಪೇತು ಆಗಿ ಬಂದಿರುವವರೆಲ್ಲಾ ಸೇರಿ ಮಂಡ್ಯದಲ್ಲಿ ಒಂದು ಸಭೆ ಆಯಿತು. ಅಲ್ಲಿಗೆ ಅನೇಕ ಇಲಾಖಾ ಅಧಿಕಾರಿಗಳೆಲ್ಲಾ ಬಂದಿದ್ದರು. ನಾವೂ ಕೂಡ ಅವತ್ತು ಇದರ ಸಂಬಂಧವಾಗಿ ಕೆಲವು ಪ್ರಶ್ನೆಗಳನ್ನು ಹಾಕಿದಾಗ ಯಾರನ್ನು ಈಗ ತೆಗೆದುಹಾಕಿದ್ದೀರೋ ಅವರಿಂದ ಏನು ಉತ್ತರವನ್ನೂ ಕೊಡುವುದಕ್ಕಾಗಲಿಲ್ಲ. ಅಂತಹ ಆಫೀಸರುಗಳನ್ನು ಇಟ್ಟುಕೊಳ್ಳದೆ ಹೆಚ್ಚಿಗೆ ಬೆಳೆಯುವುದು ಹೇಗೆ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಈ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಸರ್ಕಾರಕ್ಕೆ ನನ್ನ ಒಂದು ಸಲಹೆ ಏನೆಂದರೆ ಈ ನಾನಾ ಖಾತೆಗಳಿಗಾಗಿ ರಾಜಕೀಯದಲ್ಲಿ ಎಲ್ಲಾ ಆಫೀಸರುಗಳಿಗೂ, ಅಧಿಕಾರಿಗಳಿಗೂ ಭಿನ್ನಾಭಿಪ್ರಾಯಗಳು ಬರುವುದು ಸ್ವಾಭಾವಿಕ. ಇಂತಹ ಸಂದರ್ಭದಲ್ಲಿ ಯಾರಾದರೂ ಒಬ್ಬರು ಒಂದು ಶಿಫಾರ್ಸು ಮಾಡುವುದು, ನಮ್ಮವನು ಎಂದು ಹೇಳುವುದು ಇವರು ನಮ್ಮವರು ಅವರು ಬೇರೆಯವರು ಎಂಬುದಾಗಿ ಪಕ್ಷಪಾತ ಮಾಡದೆ ಎಲ್ಲವನ್ನೂ ಕೂಲಂಕಷವಾಗಿ ವಿಚಾರಮಾಡಿ ವಿಮರ್ಶೆಮಾಡಿ ಸತ್ಯವಿದ್ದರೆ ನೀವು ಕ್ರಮ ತೆಗೆದುಕೊಳ್ಳಿ. ಹಾಗೆ ಮಾಡದೆ ಯಾರೋ ಒಬ್ಬ ದೊಡ್ಡ ಮನುಷ್ಯ ಬಂದು ಹೇಳಿದ. ಅವನ ಮಾತಿಗೆ ಗೌರವ ಕೊಡಬೇಕೆಂದು ಕ್ರಮ ತೆಗೆದುಕೊಂಡರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಸರ್ಕಾರದ ಆಡಳಿತದ ಬಗೆಯೂ ಹೋಗುತ್ತದೆ. ಸರ್ಕಾರಕ್ಕೆ ಕೆಟ್ಟ ಹೆಸರೂ ಬರುತ್ತದೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ನಾನು ಇಲ್ಲಿ ಒಂದು ನಿದರ್ಶನವನ್ನು ಹೇಳುತ್ತೇನೆ. ಈಗ್ಗೆ ಹತ್ತು ವರ್ಷಗಳ ಕೆಳಗೆ ನಮ್ಮ ತಾಲ್ಲೂಕಿನಲ್ಲಿ ಒಂದು ಉತ್ತಮವಾದ ಜಾಗದಲ್ಲಿ ಒಂದು ಅಣೆಯನ್ನು ಹಾಕಿದರು. ಅಲ್ಲಿನ ಕೆಲಸವನ್ನು ಒಬ್ಬ ಕಂಟ್ರಾಕ್ಟು ದಾರರಿಗೆ ಕಂಟ್ರಾಕ್ಟುಕೊಟ್ಟರು. ಅಲ್ಲಿಂದೀಚೆಗೆ ನೂರಾರು ಕೆಲಸಗಳಾಗಿವೆ. ಆದರೆ 8-9 ವರ್ಷಗಳ ಹಿಂದೆ ತೆಗೆದುಕೊಂಡ ಕೆಲಸ ಇದುವರವಿಗೂ ಆಗಿಲ್ಲ. ಆ ಕೆಲಸವನ್ನು ಕಂಟ್ರಾಕ್ಟ್ ತೆಗೆದುಕೊಂಡು ಕಂಟ್ರಾಕ್ಟುದಾರರಿಗೆ ಎಗ್ಸಿಕ್ಯುಟೀವ್ ಇಂಜಿನಿಯರ್, ಅವರ ಮೇಲ್ಪಟ್ಟ ಸೂಪರಿಂಟೆಂಡೆಂಟ್ ಇಂಜಿನಿಯರು, ಚೀಫ್ ಇಂಜಿನಿಯರು ಮತ್ತು ಮಂತ್ರಿಗಳು ಎಲ್ಲರೂ ಸಹ ಆ ಕಂಟ್ರಾಕ್ಟುದಾರರಿಗೆ ವಿನಾಯ್ತಿಯನ್ನು ಕೊಡುತ್ತಿದ್ದಾರೆ. ಆ ಕಂಟ್ರಾಕ್ಟನ್ನು ಕ್ಯಾನ್ಸಲ್ ಮಾಡಿಲ್ಲ. ಆ ಜಾಗದಲ್ಲಿ ಕೆಲಸ ಪ್ರಾರಂಭವಾದ ಮೇಲೆ ಹತ್ತಾರು, ನೂರಾರು ಕೆಲಸಗಳಾಗಿವೆ. ನೂರಾರು ಎಕರೆ ಫಸಲು ಬರುವಂಥ ಜಾಗದಲ್ಲಿ ಕೆಲಸಗಳಾಗಿವೆ. ಬಹಳ ಉತ್ತಮವಾದ ಜಾಗವಾಗಿದ್ದು, ಅಲ್ಲಿ ನಾನೂರು ಅಥವಾ 500 ಎಕರೆ ಫಸಲು ಆಗತಕ್ಕಂಥಾ ಒಂದು ಪ್ರದೇಶದಲ್ಲಿ ಕಂಟ್ರಾಕ್ಟುದಾರನ ಒಂದು ಅವ್ಯವಸ್ಥೆಯಿಂದ ಆ ಕೆಲಸ ಆಗದೆ ಇದ್ದರೆ, ಅವನು ಆ ಕೆಲಸವನ್ನು ಮಾಡದೆ ಹೋದರೆ, ಅವನು ಯಾರೇ ಆಗಿರಲಿ ಅವನನ್ನು ಸ್ಥಳೀಯ ಅಧಿಕಾರಿಗಳು ತೆಗೆದುಹಾಕಿ ಬೇರೆ ವ್ಯವಸ್ಥೆಯಿಂದ ಆ ಕೆಲಸವನ್ನು ಮಾಡತಕ್ಕದ್ದು ಸೂಕ್ತ ಎಂದು ನನಗನ್ನಿಸುತ್ತದೆ. ಶ್ರೀಮಾನ್ ಪೂಜ್ಯ ವಿಶ್ವೇಶ್ವರಯ್ಯನವರ ಒಂದು ದೂರ ದೃಷ್ಟಿಯಿಂದ ಮಂಡ್ಯ ಜಿಲ್ಲೆಯ ಅನೇಕ ರೈತರು ಇವೊತ್ತು ಸುಖವಾಗಿ ಬಾಳುತ್ತಿದ್ದಾರೆ. ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಲ್ಲಿ ಪ್ರತಿಯೊಂದೂ ಸಮೃದ್ಧಿಯಾಗಿದೆ. ಮಳೆ ಬೆಳೆ ಚೆನ್ನಾಗಿ ಆಗಿದೆ. ದನಗಳಿಗೆ ಮೇವು ಸಿಕ್ಕುತ್ತಿದೆ. ಆದರೆ ನಾಗಮಂಗಲ, ಕೃಷ್ಣರಾಜಪೇಟೆ, ಮಳವಳ್ಳಿ, ಮದ್ದೂರು ಈ ತಾಲ್ಲೂಕುಗಳಲ್ಲಿ ಕೆಲವು ಹೋಬಳಿಗಳಲ್ಲಿ ಬೆಂಗಾಡಾಗಿದೆ. ಅಲ್ಲಿ ಮಳೆ ಬೆಳೆಗಳು ಇಲ್ಲದೆ ಅಲ್ಲಿನ ಜನಗಳು ತೊಂದರೆಪಡುತ್ತಿದ್ದಾರೆ ಎನ್ನತಕ್ಕಂಥ ವಿಚಾರ ಸರ್ಕಾರದ ಗಮನಕ್ಕೆ ಇದುವರೆವಿಗೂ

(ಶ್ರೀ ಟಿ. ಎನ್‌. ಮಾದಪ್ಪಗೌಡ)

ಬಂದಿಲ್ಲವೆಂದು ಕಾಣುತ್ತದೆ. ಆ ಪ್ರದೇಶದಲ್ಲಿ ಮಳೆ ಬೆಳೆ ಆಗದೆ ಇರುವುದರಿಂದ ಅಲ್ಲಿನ ರೈತರು ಅಲ್ಪಾವಧಿ ಸಾಲವನ್ನು ತೆಗೆದುಕೊಂಡಿದ್ದನ್ನು ತೀರಿಸುವುದಕ್ಕೆ ಸಾಧ್ಯವಾಗಿಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಅಲ್ಲಿನ ರೈತರು ಇರುವಾಗ ಆ ಪ್ರದೇಶವನ್ನು ಅಭಾವ ಪ್ರದೇಶವೆಂದು ಸರ್ಕಾರದವರು ಪರಿಗಣಿಸಿಲ್ಲ. ಆ ಪ್ರದೇಶದಲ್ಲಿ ಒಂದು ಹೆಚ್ಚಿಗೆ ಕಾಮಗಾರಿಗಳನ್ನು ತೆಗೆದುಕೊಂಡು ಅಲ್ಲಿನ ಜನಗಳಿಗೆ ಅನುಕೂಲ ಮಾಡಿ ಕೊಡಬೇಕೆಂದು ನಾನು ಸರ್ಕಾರದವರನ್ನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಎಷ್ಟು ಹೇಳಿದರೂ ಅದು ಸ್ವಲ್ಪವಾಗಿದೆ. ಸುಮಾರು 180-200 ಶಾಲೆಗಳಿರುವ ಕಡೆ, 401 ಚದರ ಮೈಲಿ ವಿಸ್ತೀರ್ಣವಿರುವ ನಮ್ಮ ತಾಲ್ಲೂಕಿಗೆ ಒಬ್ಬರು ಇನ್‌ಸ್ಪೆಕ್ಟರಿದ್ದಾರೆ. ಒಂದು ವರ್ಷದಲ್ಲಿ ಅರ್ಧಕಾಲ ಈ ವಿದ್ಯಾ ಸಂಸ್ಥೆಗಳಿಗೆ ರಜಾ ಇದ್ದೇ ಇರುತ್ತದೆ. ವಿದ್ಯಾ ಸಂಸ್ಥೆಗಳಲ್ಲಿರತಕ್ಕ ಉಪಾಧ್ಯಾಯರಲ್ಲಿ ನಾನಾ ಬಗೆಯ ಉಪಾಧ್ಯಾಯರು ಇರುತ್ತಾರೆ. ಅವರಲ್ಲಿ ಯೋಗ್ಯರು, ಬುದ್ಧಿವಂತರು, ಮತ್ತು ಸ್ಕೂಲನ್ನು ತೆರೆಯದೆ ಇರತಕ್ಕಂಥ ಉಪಾಧ್ಯಾಯರೂ ಇರುತ್ತಾರೆ. ಇಂಥಾ ಉಪಾಧ್ಯಾಯರುಗಳನ್ನೆಲ್ಲಾ ಒಂದು ಹತೋಟಿಯಲ್ಲಿಟ್ಟುಕೊಂಡು ಅವರಿಂದ ಕೆಲಸ ತೆಗೆದುಕೊಳ್ಳುವುದು ಹೇಗೆ ಎನ್ನುವುದನ್ನು ಕೂಡ ಸರ್ಕಾರದವರು ನೋಡಬೇಕು. ನೂತನ ಸಮಾಜವನ್ನು ರಚಿಸಲು ಜನಗಳನ್ನು ತರಪೇತು ಮಾಡತಕ್ಕ ಒಂದು ದೊಡ್ಡ ಜವಾಬ್ದಾರಿ ಉಪಾಧ್ಯಾಯರ ಮೇಲಿದೆ. ಉಪಾಧ್ಯಾಯರಿಗೆ ಒಳ್ಳೆಯ ಸಂಬಳವನ್ನು ಕೊಟ್ಟು ಅವರಿಂದ ಉತ್ತಮ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು. ಆದರೆ ಒಂದು ವಿಚಾರವನ್ನು ಮಾತ್ರ ಸರ್ಕಾರದ ಗಮನದಲ್ಲಿರಬೇಕು. ಆಯಾ ತಾಲ್ಲೂಕಿನ ಉಪಾಧ್ಯಾಯರು ಆಯಾ ತಾಲ್ಲೂಕಿನಲ್ಲಿ ಇಲ್ಲದೆ ಇರುವಹಾಗೆ ಮಾಡಬೇಕು. ಉಪಾಧ್ಯಾಯರುಗಳು ಬೇರೆ ಬೇರೆ ತಾಲ್ಲೂಕುಗಳಲ್ಲಿ ಕೆಲಸ ಮಾಡುವಂತಾದರೆ ಆಗ ಒಂದು ಉತ್ತಮವಾದ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಟ್ಟಹಾಗೆ ಆಗುತ್ತದೆ. ಏತಕ್ಕೆಂದರೆ ಇವೊತ್ತಿನ ದಿವಸ ಆಯಾ ಸ್ಥಳದಲ್ಲಿರತಕ್ಕ ಉಪಾಧ್ಯಾಯರುಗಳು ಹಳ್ಳಿಗಳಲ್ಲಿ ನಾನಾ ವಿಚಾರಗಳಿಗೆ ಕೈಹಾಕಿ ಕೋರ್ಟು ಕಛೇರಿಗಳಿಗೆ ಹತ್ತಿರತಕ್ಕಂಥ ಅನೇಕ ನಿದರ್ಶನಗಳು ನಮಗೆ ಕಂಡುಬರುತ್ತಿವೆ. ಇದು ನಮ್ಮ ಅನುಭವಕ್ಕೆ ಬಂದಿರತಕ್ಕ ಮಾತು. ಆದ್ದರಿಂದ ಉಪಾಧ್ಯಾಯರನ್ನು ಆದಷ್ಟು ಅವರವರ ಸ್ಥಳದಲ್ಲಿ ಇಡದೆ ಬೇರೆ ಕಡೆ ಇಟ್ಟು ಅವರಿಂದ ಕೆಲಸ ತೆಗೆದುಕೊಳ್ಳತಕ್ಕ ಒಂದು ಏರ್ಪಾಡನ್ನು ಸರ್ಕಾರದವರು ಮಾಡಬೇಕು. ಅದರ ಜೊತೆಗೆ ಈಗ ಅನೇಕ ಉಪಾಧ್ಯಾಯರನ್ನು ಕೆಲಸಕ್ಕೆ ತೆಗೆದುಕೊಳುತ್ತಿದ್ದಾರೆ ಇಂಥಾ ಒಂದು ಸಂದರ್ಭದಲ್ಲಿ ಹೊಸದಾಗಿ ತರಪೇತನ್ನು ಪಡೆದಿರತಕ್ಕವರು ಬೇಕಾದಷ್ಟು ಇದ್ದರೂ ಕೂಡ ಲೋಕಲ್ ಕ್ಯಾಂಡಿಡೇಟ್ಸ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಟ್ರೈನಿಂಗ್ ತೆಗೆದುಕೊಳ್ಳದೆ ಇರತಕ್ಕ ಉಪಾಧ್ಯಾಯರನ್ನು ನೇಮಿಸಿಕೊಳ್ಳಬಾರದು. ಟ್ರೈನಿಂಗ್ ಮಾಡಿರತಕ್ಕವರಿಗೆ ಆದಷ್ಟೂ ಮೊದಲು ಕೆಲಸವನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಪೋಲಿಸಿನವರ ವಿಚಾರದಲ್ಲಿ ಹೇಳುವುದಾದರೆ ಸರಿಯಾದ ವಿದ್ಯಾಭ್ಯಾಸ ಇಲ್ಲದೆ ಇರುವವರನ್ನು ಕಾನ್‌ಸ್ಟೇಬಲ್ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಅವರು ಅಷ್ಟು ಚೆನ್ನಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಾನು ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಕೊಡಗು ಜಿಲ್ಲೆಗೆ ಹೋಗಿದ್ದೆ. ಅಲ್ಲಿರತಕ್ಕ ಪೋಲೀಸಿನವರ ವ್ಯವಸ್ಥೆ ನನ್ನ ಮನಸ್ಸಿಗೆ ಹಿಡಿಯಿತು. ಅವರಿಗೆ ಅಚ್ಚುಕಟ್ಟಾಗಿ ಸಂಬಳ ಕೊಡುತ್ತಾರೆ. ಆದ್ದರಿಂದ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಜೊತೆಗೆ ಅಲ್ಲಿ ಪೋಲಿಸಿನವರು ಬಹಳ ಕಡಮೆ ಜನ ಇದ್ದಾರೆ. 100 ಜನ ಅಪ್ರಯೋಜಕರನ್ನು ಇಟ್ಟುಕೊಳ್ಳುವುದಕ್ಕೆ ಬದಲಾಗಿ, ಅಚ್ಚುಕಟ್ಟಾಗಿ ಸಂಬಳ ಕೊಟ್ಟು ವಿದ್ಯಾವಂತರಾಗಿರತಕ್ಕ ಮತ್ತು ಕಾನೂನನ್ನು ತಿಳಿದುಕೊಂಡಿರುವವರನ್ನು ಈ ಇಲಾಖೆಗೆ ಸೇರಿಸಿಕೊಂಡರೆ ನಮ್ಮ ಎಷ್ಟೋ ಕಷ್ಟಗಳು ಬಗೆಹರಿಯುತ್ತವೆ. ಮತ್ತು ಜನಗಳಿಗೂ ಒಳ್ಳೆಯದಾಗುತ್ತದೆ.

ಇನು ಕಮ್ಯುನಿಟಿ ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳುವುದಾದರೆ, ಶ್ರೀಮಾನ್ ಲಕ್ಕಪ್ಪನವರು ಈ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಇದರಲ್ಲಿ ಸುಮ್ಮನೆ ಆಳಿಗೆ ಆಳುಹೋರ ಎಂದು ಹೇಳಿದ ಹಾಗೆ ಇದರಿಂದ ಅಂಥಾ ಉತ್ತಮವಾದ ಕೆಲಸಗಳೇನೂ ಆಗಿಲ್ಲ ಎಂದು ನಾನು ಹೇಳಬಯಸುತ್ತೇನೆ. ಏತಕ್ಕೆಂದರೆ ನಾನು ತಾಲ್ಲೂಕು ಬೋರ್ಡು ಸದಸ್ಯನಾಗಿ ಕಮ್ಯುನಿಟಿ ಡೆವಲಪ್‌ಮೆಂಟ್ ಏರಿಯಾದಲ್ಲಿ ತಿರುಗಾಡಿ ಅದರ ಒಂದು ಅನುಭವದ ಮೇಲೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಕಮ್ಯುನಿಟಿ ಡೆವಲಪ್‌ಮೆಂಟ್ ಕೆಲಸಗಳನ್ನು ಸರ್ಕಾರದವರು ಮಾಡಿಸುವುದಕ್ಕೆ ಬದಲಾಗಿ, ಅದೇ ಹಣವನ್ನು ತಾಲ್ಲೂಕು ಬೋರ್ಡುಗಳಿಗೆ ಗ್ರ್ಯಾಂಟ್ ರೂಪದಲ್ಲಿ ಒದಗಿಸಿದರೆ ಅವರು ಇನ್ನೂ ಉತ್ತಮವಾದ ಕೆಲಸವನ್ನು ಮಾಡುತ್ತಾರೆಂದು ನನಗನ್ನಿಸುತ್ತದೆ. ಈ ಎನ್. ಇ. ಎಸ್. ಸ್ಕೀಮಿನ ಇಲಾಖೆಯಲ್ಲಿ ಬರಿಯ ಅಧಿಕಾರಿಗಳೇ ತುಂಬಿದ್ದಾರೆ. ಆದರೆ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ನಾನು ಈಗ ಸಲ್ಪದಿವಸಗಳ ಹಿಂದೆ ನಮ್ಮ ತಾಲ್ಲೂಕಿನಲ್ಲಿ ಪ್ಯಾಕೇಜ್ ಜೀಪಿನಲ್ಲಿ ಹೋದಾಗ ನಡೆದಂಥಾ ಒಂದು ವಿಚಾರವನ್ನು ಹೇಳುತ್ತೇನೆ. ಅದು ಏನೆಂದರೆ ಈಗ ಗ್ರಾಮಾಂತರ ಪ್ರದೇಶದಲ್ಲಿ 4 ಹಳ್ಳಿಗೆ ಒಬ್ಬ ವಿಲೇಜ್ ಲೆವೆಲ್ ವರ್ಕರ್ ಇದ್ದಾರೆ. ಅವರು ಎಕ್ಸಪರಿಮೆಂಟಲ್ ಫಾರಮ್ ಮಾಡುವುದಕ್ಕೋಸ್ಕರ ಅವರಿಗೆ ಆಫೀಸಿನಿಂದ ಎರಡೆರಡು ಸೇರು ರಾಗಿಯನ್ನು ಕೊಡುತ್ತಿದ್ದಾರೆ. ನಾನು ಮತ್ತು ಇತರೆ ಎನ್. ಇ. ಎಸ್. ಅಧಿಕಾರಿಗಳೊಡನೆ ಎನ್. ಇ. ಎಸ್. ಜೀಪಿನಲ್ಲಿ ದೇವಿಹಳ್ಳಿಯ ಗೇಟಿನ ಹತ್ತಿರ ಹೋದಾಗ ಅಧಿಕಾರಿಯು ಎರಡು ಸೇರು ರಾಗಿಯನ್ನು ಆ ಗ್ರಾಮ ಸೇವಕರಿಗೆ ಕೊಡುವುದಕ್ಕೆ ತೆಗೆದುಕೊಂಡು ಹೋಗಲು ಹೇಳಿದರು (ಜೀಪಿನಲ್ಲಿದ್ದದ್ದು). ಆಗ ಅವರು ಆ ರಾಗಿಯನ್ನು ತೆಗೆದುಕೊಳ್ಳದೆ ಅದನ್ನು ಅವರಿರುವ ಸ್ಥಳಕ್ಕೆ ಜೀಪಿನಲ್ಲಿ ತಂದು ಕೊಡುವಂತೆ ಹೇಳಿದರು. ಇಂಥಾ ಮನೋಭಾವದ ಜನಗಳು ಇದ್ದರೆ ಕೆಲಸ ಹೇಗಾಗುತ್ತದೆ? ಇದನ್ನು ಗಮನದಲ್ಲಿಟ್ಟುಕೊಂಡು ಅದಷ್ಟು ಜಾಗ್ರತೆ ಕೆಲಸಗಳು ಆಗುವ ರೀತಿಯಲ್ಲಿ ಸರ್ಕಾರದವರು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಅಭಿನವ ಭರತ ಶ್ರೀ ಕಂಠಿಯವರ ಆಳ್ವಿಕೆಯಲ್ಲಿ ಮಂಡಿಸಲ್ಪಟ್ಟ ಅಭಿನವ ರಾಮ ಶ್ರೀ ನಿಜಲಿಂಗಪ್ಪನವರ ಅಧಿಕಾರ ಸ್ವೀಕಾರದ ನಂತರ ಉಳಿತಾಯ, ಖೋತಾವಿಮರ್ಶೆಗೆ ಬಂದಿರುವ, ಜಮಾ,

ಖರ್ಚು, ವಿನಿಯೋಗ, ಗಳಿಂದ ಕೂಡಿರುವ ಈ ರಾಷ್ಟ್ರೀಯ ಪಂಚಾಂಗಅರ್ಥಾತ್ ಆಯವ್ಯಯ ವರದಿಯನ್ನು ಸ್ವಾಗತಿಸುವ ಮುಂಚೆ ಒಂದೆರಡು ಮಾತನಾಡಬೇಕೆಂದಿದ್ದೇನೆ.

5-30 P.M.

ಇದುವರೆಗೆ ಮಾತಾಡಿ ವಿಮರ್ಶೆ ಮಾಡಿದ ನನ್ನ ಮಾನ್ಯ ಸೋದರರು ಕೆಲವರು ಮಂತ್ರಿಮಂಡಲದ ಬದಲಾವಣೆ, ಮಂತ್ರಿಗಳ ಸಂಖ್ಯೆ ವಗೈರೆ ಬಗ್ಗೆ ಆಶ್ಚರ್ಯವನ್ನು ವ್ಯಕ್ತ ಮಾಡಿ, ಹೀಗೇಕೆ? ಎಂದು ಪ್ರಶ್ನಿಸಿದ್ದಾರೆ. ಇದೆಲ್ಲವೂ ಪ್ರಜಾಪ್ರಭುತ್ವದ ರಾಜಕೀಯದಲ್ಲಿ ನಡೆಯತಕ್ಕ ಘಟನೆಗಳಾದ್ದರಿಂದ ಆಶ್ಚರ್ಯ ಪಡಬೇಕಾಗಿಲ್ಲ. ಪ್ರಶ್ನಿಸಬೇಕಾದ ಪ್ರಮೇಯಗಳೂ ಕಾಣಲಿಲ್ಲ. ಮಂತ್ರಿಮಂಡಲದ ಸಂಖ್ಯೆ ಹೆಚ್ಚಾಗಿದೆ ಎಂದು ಕೆಲವರು ಆಕ್ಷೇಪಿಸಿದ್ದಾರೆ. ದಿನೇ ದಿನೇ ದೇಶದ ಆಡಳಿತದ ಹೊರೆಯು ಹೆಚ್ಚುತ್ತಿರುವುದರಿಂದ ಕರ್ತವ್ಯ ನಿರ್ವಹಿಸಲು ಇಂತಿಷ್ಟೇ ಎಂದು ನಾವು ಸಂಖ್ಯೆ ನಿರ್ಧರಿಸಲು ಬರಲಾರದೆಂದು ನನ್ನ ಭಾವನೆ. ಪಕ್ಕದ ರಾಜ್ಯಗಳಲ್ಲಿ ಕಡಮೆ ಸಂಖ್ಯೆಯ ಮಂತ್ರಿಮಂಡಲವಿದೆ ಇಲ್ಲೇಕೆ ಹೆಚ್ಚು ಎಂದು ಪ್ರಶ್ನಿಸಿದ್ದಾರೆ. "ನೆರೆಮನೆಯವರು ಸರಿಗೆ ಹಾಕಿಕೊಂಡರೆ ನಾವು ಉರುಲು ಹಾಕಿಕೊಳ್ಳಬೇಕೇ?" ಅವರ ಸ್ಥಿತಿಗತಿಗಳಂತೆ ಅವರು ಹೋಗುತ್ತಿದ್ದಾರೆ. ನಮ್ಮ ಸ್ಥಿತಿಗಳಂತೆ ನಾವು ಹೋಗೋಣ. ಮಂತ್ರಿಗಳ ಮೇಲೆ ನಾವು ಸಹಾನುಭೂತಿ ತೋರಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏಕೆ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಏಕೆ ಎನ್ನುವುದನ್ನು ಮುಂದೆ ಹೇಳುತ್ತೇನೆ. ಆಡಳಿತವೆಂಬ ರಥಕ್ಕೆ ಮಂತ್ರಿಗಳೇ ಕುದುರೆಗಳು. ಸಾರಥಿ ನಾವೇ—ಸಾರಥಿ ಕೆಲಸದಲ್ಲಿ ನಾವು ಪ್ರವೀಣರಾದರೆ ಎಷ್ಟು ಮಂತ್ರಿಗಳಿದ್ದರೂ ಉಪಯೋಗ ತೆಗೆದುಕೊಳ್ಳಬಹುದು. ಒಂದು ವೇಳೆ ಯಾವುದಾದರೂ ಕುದುರೆ ಮೈಗಳ್ಳತನ ಮಾಡಿದರೆ ಅದನ್ನು ಬಿಚ್ಚೋಣ. ಬೇರೆ ಕಟ್ಟಿಕೊಳ್ಳೋಣ. ಆದಾಯ ಹೆಚ್ಚಿಸಿರಿ, ಅಪವ್ಯಯ ಮಾಡಬೇಡಿ, ಕೊರತೆ ತರಬೇಡಿ, ಎಂದು ಮಂತ್ರಿಗಳಿಗೆ ತಿಳಿಸೋಣ. ಆಡಳಿತದಲ್ಲಿ ಕಳೆ, ಕಸ, ತುಂಬಿಕೊಂಡಿದೆ, ಸ್ವಚ್ಛಮಾಡಿರಿ ಎಂದು ಹೇಳೋಣ. ನನಗಂತೂ ಮಂತ್ರಿಗಳಾಗಿರುವವರ ಮೇಲೆ ತುಂಬಾ ಸಹಾನುಭೂತಿ ಇದೆ. ಯಾರೋ ಒಬ್ಬರು ನಮ್ಮ ಊರಿನಲ್ಲಿ ತುಂಬ ಲಗ್ನವಾಗುವ ಹೆಣ್ಣುಗಳಿವೆ ಎಂದರಂತೆ. ಅದಕ್ಕೆ ಒಬ್ಬರು ನನಗೊಂದಲ್ಲದೆ ನಮ್ಮ ಅಪ್ಪನಿಗೊಂದು ಕನ್ಯೆಬೇಕಾಗಿದೆ ಎಂದರು. ಸರಿ, ಕನ್ಯೆಗಳಿಗೆ 3000-4000 ರೂಪಾಯಿ ತೆರ ಕೊಡಬೇಕಾಗುತ್ತದೆ. ಇದು ನಮ್ಮ ಊರಿನ ಸಂಪ್ರದಾಯ ಎಂದು ಹೇಳಿದ್ದಕ್ಕೆ, ಅಯ್ಯೋ ನನಗಿನ್ನು ವಯಸ್ಸು 18, ನಮ್ಮಪ್ಪ ಮುದುಕ ಕನ್ಯೆ ಬೇಡ, ಎಂದು ಕನ್ಯಾರ್ಥಿ ಹೇಳಿದ. ಅದರಂತೆ ಮಂತ್ರಿ ಕೆಲಸ ಕಷ್ಟ ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ, ಕೈ ಶುದ್ಧಿ ಇಲ್ಲದಿರುವುದು ತಿಳಿದುಬಂದರೆ ಕೂಡಲೇ ರಾಜಿನಾಮೆ ಕೊಡಬೇಕಾಗುತ್ತದೆ ಎಂಬ ನೀತಿಯನ್ನು ಮುಖ್ಯಮಂತ್ರಿಗಳು ಕಟ್ಟುನಿಟ್ಟಾಗಿ ಜಾರಿಗೆ ತರಲಿ. ಆಗ ಮಂತ್ರಿಗಳ ಸಂಖ್ಯೆ ನಿಜವಾಗಿಯೂ ಕೂಡ ಕಡಮೆಯಾಗುತ್ತದೆ. ಪ್ರಜಾಸಾರ್ವಭೌಮತ್ವದ ಕಡಿವಾಣ ಮತ್ತು ಅಂಕುಶಕ್ಕೆ ಅಂಜಿದ್ದಾರೆಂಬುದು ಮಾನ್ಯ ಮಂತ್ರಿಗಳನ್ನು ನೋಡಿದರೆ ಗೊತ್ತಾಗುವುದಿಲ್ಲವೇ? ಸದಸ್ಯರು ಏನು ಹೇಳುತ್ತಿದ್ದಾರೋ ಎಂದು ಕಿವಿಗೊಟ್ಟು ಕೇಳುತ್ತಿದ್ದಾರೆ. ಕಾರಣ ಈ ಪ್ರಸಂಗದಲ್ಲಿ ಅವರಿಗೆ ಸಹಾನುಭೂತಿ ತೋರಿಸಿ ಕೀರ್ತಿ ತನ್ನಿ ಎಂದು ಹಾರೈಸೋಣ.

ನಾನು ಆಯವ್ಯಯದ ಅಂಕೆ ಸಂಖ್ಯೆಗಳನ್ನು ವಿಮರ್ಶಿಸುವ ಗೋಜಿಗೆ ಹೋಗುವುದಿಲ್ಲ. ಏಕೆಂದರೆ "ಮೂರಿಟ್ಟರಾರಕ್ಕು, ಆರು ಹನ್ನೆರಡಕ್ಕು, ಹನ್ನೆರಡೇ ಮತ್ತು ಆರಕ್ಕು, ಆಯವ್ಯಯದ ಮರ್ಮವೇ ಈ ರೀತಿಯಕ್ಕು ಸರ್ವಜ್ಞ" ಎಂದು ರಾಜಕೀಯ ಗಣಿತಜ್ಞರು ಹೇಳಿದ್ದಾರೆ. ಮನೆತನದ ಆದಾಯವೇ ಏರುಪೇರಾಗುತ್ತಿರುವಾಗ ರಾಷ್ಟ್ರದ ಆದಾಯವು ಏರುಪೇರಾಗುವುದು ಸಹಜ. ಆಡಳಿತದಲ್ಲಿ ದಕ್ಷತೆ, ಪ್ರಾಮಾಣಿಕತೆ, ಚಾಣಕ್ಯತೆಯಿದ್ದರೇನೇ ಏರುಪೇರುಗಳನ್ನು ಸರಿದೂಗಿಸಬಹುದು. ಹೇಗೆಂದರೆ ಅಮೇರಿಕಾದ ಕೋಟ್ಯಾಧೀಶ ಆಂಡ್ರ್ಯೂ ಕಾರ್ನೆಗಿ ಒಮ್ಮೆ ಒಂದು ಪೆನ್ನಿ ಕಳೆದುಕೊಂಡು ಅದು ಸಿಕ್ಕುವವರೆಗೂ ಹುಡುಕಿದ. ಕೆಲವರು ಒಂದು ಪೆನ್ನಿಗೇಕೆ ಹುಡುಕುತ್ತಿದ್ದೀಯೇ ಎಂದು ಪ್ರಶ್ನೆ ಹಾಕಿದ್ದಕ್ಕೆ ಇಂದು ಒಂದು ಪೆನ್ನಿ ನಿರ್ಲಕ್ಷಿಸಿದರೆ ನಾಳೆ ಒಂದು ಪೌಂಡು ನಿರ್ಲಕ್ಷಿಸಬೇಕಾಗುತ್ತದೆ ಎಂದು ಹೇಳಿದನಂತೆ.

ಇದೇ ರೀತಿ ನಮ್ಮ ಮಂತ್ರಿಗಳೂ, ಅಧಿಕಾರ ವರ್ಗದವರು ಕಾಸಿನ ಲೆಕ್ಕಾಚಾರವನ್ನು ಕೈಬಿಡದೆ ನೋಡಿಕೊಂಡಲ್ಲಿ ಆದಾಯ ವೆಚ್ಚಗಳ ಹಿಡಿತ ದೊರೆಯುತ್ತದೆ. ಇಂತಹ ಮನೋಭಾವವನ್ನು ಬೆಳೆಸಿಕೊಳಿ. ಎಂದು ಆಡಳಿತ ವರ್ಗಕ್ಕೆ ವಿನಂತಿ ಮಾಡುತ್ತೇನೆ.

ಈ ವಿಶಾಲ ಮಂತ್ರಿಮಂಡಲದಿಂದ ನಾನೊಂದು ನಿರೀಕ್ಷೆ ಇಟ್ಟುಕೊಂಡಿದ್ದೇನೆ. ದೇಶದ ಆಯವ್ಯಯ ತೂಗಿಸಲು, ಗೋರ್ವಾಲ ವರದಿ ಮತ್ತು ಎ. ಜಿ. ರಾಮಚಂದ್ರರಾಯರ ಸಂಪನ್ಮೂಲ ಮಿತವ್ಯಯ ಸಮಿತಿಯಲ್ಲಿ 41 ಸಲಹೆಗಳು ಮತ್ತು 78 ಉಪ ಸಲಹೆಗಳೂ ಇವೆ. ಈ ಸಲಹೆಗಳನ್ನು ಜಾರಿಗೆ ತಂದು ಮಿತವ್ಯಯ ಸಾಧಿಸುವುದಾದರೆ, ಸಂಪನ್ಮೂಲ ಹೆಚ್ಚಿಸುವುದಾದರೆ ಒಂದೆರಡು ಮಂತ್ರಿಗಳನ್ನು ತೆಗೆದುಕೊಳ್ಳಲಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದರಲ್ಲಿ ತಾವೂ ಕೂಡ ಇರಲಿ ಅಂತೇನೋ (ನಗು!)

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನಾವು ಯಾವಾಗಲೂ ಮಂತ್ರಿ ಪದವಿಗೆ ಆಸೆ ಮಾಡುವವರು ಅಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಬ್ಬರು ಸುಮಂಗಲೆಯರು ಇದ್ದಾರೆ. ತಾವೂ ಬನ್ನಿ; ಆರತಿ ಮಾಡಬೇಕಾಗಿದ್ದರೆ ಇಬ್ಬರು ಹೆಣ್ಣು ಮಕ್ಕಳು ಇರಬೇಕು! (ನಗು!)

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅದಿರಲಿ. ಒಂದೊಂದು ಇಲಾಖೆಯ ಕಳೆ, ಕಸ, ದುರ್ವಿನಿಯೋಗ ತಪ್ಪಿಸುತ್ತೇವೆಂಬ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಮಂತ್ರಿ, ಉಪಮಂತ್ರಿ ಕೈಕೊಂಡು ಆಡಳಿತ ಶುದ್ಧಿ ಮಾಡಲಿ. ತಾವು ಅಲಂಕರಿಸಿದ ಸ್ಥಾನಕ್ಕೆ ಕೀರ್ತಿ ತರಲಿ ಎಂದು ವಿನಂತಿಸುತ್ತೇವೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್, ಪಬ್ಲಿಕ್‌ವರ್ಕ್ಸ್, ವಿದ್ಯುಚ್ಛಕ್ತಿ, ಟ್ರಸ್ಟ್‌ಬೋರ್ಡ್, ಹೌಸಿಂಗ್‌ಬೋರ್ಡ್, ಮೆಡಿಕಲ್, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್, ಎಕ್ಸೈಜ್, ಅರಣ್ಯಖಾತೆ, ಮುಂತಾದ ಇಲಾಖೆಗಳಲ್ಲಿ ದುರ್ವ್ಯಯ, ಲಂಚ ತುಂಬಾ ಹೆಚ್ಚಿದೆ. ಲಂಚದ ಬಗ್ಗೆ ಸಾರ್ವತ್ರಿಕ ಆಡಳಿತದ ವಿಚಾರ ಬಂದಾಗ ಕೆಲವು ಸ್ವಾರಸ್ಯವಾದ ವಿಚಾರಗಳನ್ನು ಉತ್ತಮ ಸಲಹೆಗಳನ್ನು ಹೇಳಬೇಕೆಂದಿದ್ದೇನೆ. ಸದ್ಯಕ್ಕೆ ಇಷ್ಟು ಹೇಳುತ್ತೇನೆ. ಗೌರ್ನಮೆಂಟ್ ರಸ್ತೆಸಾರಿಗೆ ಇಲಾಖೆ ಪ್ರಜೆಗಳಿಗೊಂದು ಶಾಪ, ದೇಶಕ್ಕೆ ಪಾಪಕೂಪದಂತಿದೆ. ಈ ಬಗ್ಗೆ ಉದಾಹರಣೆಗಳೊಂದಿಗೆ ಹೇಳಬೇಕಾದರೆ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಬಹಳ ಕಾಲ ಬೇಕಾಗುತ್ತದೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಪ್ರಸಿದ್ಧ ವ್ಯಂಗ್ಯಚಿತ್ರಕಾರ ಲೋ ಒಮ್ಮೆ ಅಮೆರಿಕಾಕ್ಕೆ ಹೋಗಿದ್ದಾಗ ಪತ್ರಿಕಾ ವರದಿಗಾರರು ನ್ಯೂಯಾರ್ಕ್ ಬಗ್ಗೆ, ನಿಮ್ಮ ಅಭಿಪ್ರಾಯವೇನು ? ಎಂದು ಕೇಳಿದ್ದಕ್ಕೆ ನನ್ನ ಅಭಿಪ್ರಾಯ ನಾಳೆ ಪತ್ರಿಕೆಗಳಲ್ಲಿ ನೋಡಿ ಎಂದು ತಿಳಿಸಿದ. ಸರಿ, ನ್ಯೂಯಾರ್ಕ್ ನಗರದ ಒಂದು ಚಿತ್ರ ಬರೆದ, ಸ್ಟೇಟ್ ಎಂಪೈರ್ ಬಿಲ್ಡಿಂಗ್ ತುತ್ತ ತುದಿಯಲ್ಲಿ ದುಷ್ಕೃತ್ಯಗಳ ಅಧಿದೇವತೆ ಪಿಶಾಚಿಯನ್ನು ಬರೆದ. ಆ ಪಿಶಾಚಿ ಕೆಳಗಡೆ ನೋಡುತ್ತಾ ಅಯ್ಯೋ ಇಲ್ಲಿ ನಾನೂ ಕಲಿಯತಕ್ಕದ್ದು ಬಹಳವಿದೆ ಎಂದು ಹೇಳುವ ರೀತಿಯಲ್ಲಿ ಬರೆದ. ಆ ಅಭಿಪ್ರಾಯ ನೋಡಿ ಅಮೆರಿಕಾದವರಿಗೆ ಹೇಗಾಗಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ಅದೇ ರೀತಿ ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಅಭಿಪ್ರಾಯ ಕೊಡಬಹುದಾಗಿದೆ. ರೋಡ್‌ಟ್ರಾನ್ಸ್‌ಪೋರ್ಟ್, ಟ್ರಸ್ಟ್‌ಬೋರ್ಡ್ ವಗೈರೆ ಇಲಾಖೆಗಳ ಬಗ್ಗೆ ನಾನು ಸಂಗ್ರಹಿಸಿರುವ ವಿಚಾರ ತಿಳಿಸಬೇಕಾದರೆ ಘಂಟೆ ಗಟ್ಟಲೆ ಬೇಕಾದೀತು. ಈ ಅಧಿವೇಶನದಲ್ಲೇ ಪ್ರಸಂಗಕ್ಕನುಸರಿಸಿ ಹೇಳುವ ಅವಕಾಶ ಬರಬಹುದು. ಅಗ ಹೇಳುತ್ತೇನೆ.

ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು ಉತ್ಪನ್ನ ಹೆಚ್ಚಿಸಲು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಆಯವ್ಯಯದ ಭಾಷಣದಲ್ಲಿ ತಿಳಿಸಿದ್ದೀರಿ. ಸಂತೋಷ. ಈಗ ಅವರು ಕೈಕೊಂಡಿರುವ ಕಾರ್ಯ ನ್ಯಾಯಪೂರ್ವಕ ನಡೆಯಲಿ-ಬೆಂಗಳೂರು ಕಾರ್ಪೊರೇಷನ್ನಿನ ಕೆಲವು ನೌಕರರು ಮಾಡುವಂತೆ ಪ್ರೊಫೆಷನಲ್ ಟ್ಯಾಕ್ಸ್ ಮತ್ತು ಹೌಸ್ ಟ್ಯಾಕ್ಸ್‌ಗಳಿಗೆ 200 ರೂಪಾಯಿ ಇದ್ದವರಿಗೆ 400 ರೂಪಾಯಿಗೆ ನೋಟೀಸ್ ಕೊಡುವುದು. ಮಾಮೂಲು ಸಂದಾಯವಾದರೆ ಕೈಬಿಡುವುದು ಇಲ್ಲವಾದಲ್ಲಿ ಕಿರುಕುಳ ಕೊಡುವುದು ಈ ರೀತಿ ಮಾಡದೇ ಸರ್ಕಾರದ ಇನ್‌ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್ ಇಲಾಖೆಗಳವರು ನ್ಯಾಯಪೂರ್ವಕ ವರ್ತಿಸಲೆಂದು ಅಪೇಕ್ಷಿಸುತ್ತೇನೆ.

ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಅಧಿಕಾರ ವ್ಯಾಪ್ತಿಯಲ್ಲಿದ್ದ III ಗ್ರೇಡ್ ನೌಕರರ ನೇಮಕವನ್ನು ಸರ್ಕಾರ ವಹಿಸಿಕೊಂಡದ್ದು ತುಂಬಾ ಅನುಚಿತ. ಇದರಿಂದ ಡಿಸ್ಟ್ರಿಕ್ಟ್ ಲೆವಲ್ ಕಮಿಟಿ, ಡಿವಿಷನಲ್ ಲೆವಲ್ ಕಮಿಟಿ, ಸ್ಟೇಟ್ ಲೆವಲ್ ಕಮಿಟಿ ವಗೈರೆ ಮಾಡಿಕೊಂಡು ಇಲ್ಲದ ಗೊಂದಲವನ್ನುಂಟು ಮಾಡಿದ್ದೀರಿ. ಪಬ್ಲಿಕ್ ಸರ್ವೀಸ್ ಕಮೀಷನಿಗೆ ಕೆಲಸ ಇಲ್ಲದಂತೆ ಮಾಡಿದ್ದೀರಿ. ಅಧಿಕಾರಿಗಳ ಮತ್ತು ಮಂತ್ರಿಗಳ ಪ್ರಭಾವವಿದ್ದವರಿಗೆ ಮಾತ್ರ ಕೆಲಸ ಸಿಕ್ಕುವುದೇನೋ ಎಂಬ ಸಂಶಯಕ್ಕೆ ಆಸ್ಪದ ಕೊಟ್ಟಿದ್ದೀರಿ. ಈ ಪದ್ಧತಿಯನ್ನು ಕೂಡಲೇ ರದ್ದುಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೇ ಈ ಜವಾಬ್ದಾರಿ ವಹಿಸಬೇಕೆಂದು ಸೂಚಿಸುತ್ತೇನೆ.

ವಿದ್ಯಾ ಇಲಾಖೆಯಲ್ಲಿ ತುಂಬಾ ಪ್ರಗತಿಯಾಗಬೇಕಾಗಿದೆ. ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಸ್ಥಳ ಸಿಗದೆ ಹುಡುಗರು ಪೇಚಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಸಾಧಾರಣ 3000 ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸ್ಥಳ ದೊರೆಯದೆ ಪೇಚಾಡುತ್ತಿದ್ದಾರೆಂದು ತಿಳಿದು ಬಂದಿದೆ.

ಗಾಂಧೀನಗರ ಕ್ಷೇತ್ರದಲ್ಲೇ ಸುಮಾರು 300-400 ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೈಸ್ಕೂಲುಗಳಲ್ಲಿ ಸ್ಥಳಕ್ಕಾಗಿ ಪೇಚಾಡುವ ದೃಶ್ಯ ಕರುಣಾಜನಕವಾಗಿತ್ತು. ಸ್ಥಳಕೊಡಿಸಿ ಎಂದು ನನ್ನ ಮನೆಯ ಮುಂದೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಣ್ಣೀರು ಹಾಕುತ್ತಿದ್ದರು. ಈ ಕರುಣಾಜನಕ ದೃಶ್ಯ ತಪ್ಪಬೇಕು. ಮಾಗಡಿ ರೋಡಿನಲ್ಲಿ ಒಂದು ಹೈಸ್ಕೂಲನ್ನು ಹೋರಾಟ ಮಾಡಿ ತೆಗೆದುಕೊಂಡದ್ದಾಯಿತು. ಕಾರ್ಪೊರೇಷನ್ನಿನವರು ಕಟ್ಟಡ ಕಟ್ಟಿಸಲು ಅಲ್ಲಿ ಖಾಲಿ ಇರುವ ಸರ್ಕಾರಿ ಜಾಗ ಕೇಳಿದರೆ ಅದು ಹೆಲ್ತ್ ಡಿಪಾರ್ಟ್‌ಮೆಂಟಿಗೆ ಸೇರಿದೆ, ರೆವಿನ್ಯೂಗೆ ಸೇರಿದೆ, ವಗೈರೆ ಹೇಳುತ್ತಾ ಸರ್ಕಾರ ಕಾಲತಳ್ಳುತ್ತಿದೆ. ಸ್ಕೂಲಿಗೆ ಜಾಗ ಮಂಜೂರ್ ಮಾಡಲು ವಿಳಂಬ ಮಾಡುತ್ತಿರುವ ವಿದ್ಯಾ ಇಲಾಖೆ ಇನ್ನುಳಿದ ವಿಚಾರಗಳಲ್ಲಿ ಹೇಗಿರಬಹುದೆಂಬುದನ್ನು ನೀವೇ ಯೋಚಿಸಿರಿ. ಬೆಂಗಳೂರಿನಲ್ಲಿರುವ ಸೆಂಟ್ರಲ್ ಹೈಸ್ಕೂಲನಲ್ಲಿ ಕುರಿಗಳನ್ನು ತುಂಬಿದಂತೆ ವಿದ್ಯಾರ್ಥಿಗಳನ್ನು ತುಂಬಿದ್ದಾರೆ. ಬೆಂಗಳೂರಿನ ಶಾಲೆ ಕಾಲೇಜುಗಳನ್ನು ಸುವ್ಯವಸ್ಥೆಗೊಳಿಸಲು ಒಬ್ಬ ಪ್ರತ್ಯೇಕ ಮಂತ್ರಿಯೇ ಬೇಕಾಗಬಹುದೇನೋ ! ವಿದ್ಯಾಮಂತ್ರಿಗಳಿಗೆ ಫೋನ್ ಮಾಡಿದರೆ 'ಬಾತ್ ರೂಮಿಗೆ ಹೋಗಿದ್ದಾರೆ' ಎಂದು ಅವರ ಪರ್ಸನಲ್ ಅಸಿಸ್ಟೆಂಟ್ ಹೇಳುತ್ತಾರೆ. ಬಾತ್ ರೂಮಿನಲ್ಲೇ ಅವರ ಕೆಲಸದ ಯೋಚನೆ ಎಂಬ ವದಂತಿ ಇದೆ. ಬ್ರಹ್ಮ ಬಾತ್ ರೂಂಗೆ ಹೋದಂತಾದರೆ ನಮ್ಮ ಕೆಲಸ ಹೇಗೆ ಸಾಗಬೇಕು, ಸ್ವಾಮಿ ? ಬೇರೆಯವರಿಗೆ ತ್ಯಾಗ ಬೋಧಿಸುವ ವಿದ್ಯಾಮಂತ್ರಿಗಳು ಸಾರ್ವಜನಿಕ ಪ್ರತಿನಿಧಿಗಳಾದ ನಮ್ಮಂಥವರಿಗೆ ಫೋನಿನಲ್ಲಿ ಒಂದು ನಿಮಿಷ ಮಾತನಾಡುವ ತ್ಯಾಗ ತೋರಿಸಬಾರದೆ ?

ಆಡಳಿತ ಭಾಷೆ ಕನ್ನಡವಾಗಬೇಕೆಂದಿರುವಾಗ ಕನ್ನಡವೇ ಗೊತ್ತಿಲ್ಲದ ಪರಭಾಷಾ ಪ್ರೇಮಿಗಳಿಗೆ ಆಡಳಿತ ವರ್ಗದಲ್ಲಿ ಸ್ಥಾನವೆ ಸ್ವಾಮಿ ? "ಕನ್ನಡ ತೆರಿಯಾದು, ಇಂಗೆ ತಮಿಳು ಶಾಲೆ ಇರ್ಕದರ್ಾ" ಎಂದು ಕೇಳುವವರಿಗೆ ಪ್ರಾಥಮಿಕ ಶಾಲೆಗಳ ಆಡಳಿತ ವಹಿಸುವುದು ನ್ಯಾಯವೆ, ಸ್ವಾಮಿ ? ಆಡಳಿತ ವರ್ಗದಲ್ಲಿ ವಿನಯಶೀಲತೆ, ಸೌಜನ್ಯವನ್ನು ಜನತೆ ಅಪೇಕ್ಷಿಸುತ್ತದೆ; ಅಹಂಭಾವ, ಏಕಾಂತಪ್ರಿಯತೆಗಳನ್ನಲ್ಲ. ಇಂತಹವರು ಈಗಿನ ಆಡಳಿತ ವರ್ಗದಲ್ಲಿ ಯಾರೂ ಇಲ್ಲವೆಂದು ತಿಳಿದಿದ್ದೇನೆ. ಒಂದು ವೇಳೆ ಇದ್ದರೆ, ಅವರ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ತಿದ್ದಿಕೊಳ್ಳುವುದು ಶ್ರೇಯಸ್ಕರವೆಂದು ವಿನಂತಿ ಮಾಡಿಕೊಳ್ಳುತ್ತೇನೆ. ವಿದ್ಯಾಖಾತೆಗೆ ವಿನಯವಂತ ಭಾಷಾಪ್ರೇಮಿಗಳನ್ನು ನೇಮಿಸಿಕೊಳ್ಳಲೆಂದು ವಿದ್ಯಾಮಂತ್ರಿಗಳಿಗೆ ಒತ್ತಾಯಪೂರ್ವಕ ವಿನಂತಿಸುತ್ತೇನೆ.

ರಾಷ್ಟ್ರದ ಆಯವ್ಯಯಕ್ಕೆ ಆಧಾರ ಸ್ವರೂಪರಾದ ಮಹಿಳೆಯರ ಬಗ್ಗೆ ಸರ್ಕಾರ ನಿರ್ಲಕ್ಷತೆಯಿಂದಿದೆ. ಈ ಸಾರಿಯೂ ಮಹಿಳೆಯರಿಗೆ ಮಂತ್ರಿ ಮಂಡಲದಲ್ಲಿ ಎರಡೇ ಸ್ಥಾನಗಳನ್ನು ಕೊಟ್ಟಿದ್ದಾರೆ. ಆಡಳಿತದಲ್ಲಿ ಮೊದಲನೆಯವರಾದ ರಾಷ್ಟ್ರಾಧ್ಯಕ್ಷರಿಂದ ಹಿಡಿದು ಮುಖ್ಯಮಂತ್ರಿಗಳವರೆಗೂ ಮತ್ತಿತರ ಅಧಿಕಾರಿಗಳವರೆಗೂ ದೇಶದಲ್ಲಿ ಸ್ತ್ರೀಯರು ಜಗತ್ತಿನ ಆಧಾರ ಸ್ವರೂಪರು. ಮಕ್ಕಳ ತಾಯಂದಿರು ಶಾಂತಿ ಸಮಾಧಾನದಿಂದಿದ್ದರೆ ಇಡೀ ದೇಶವೇ ಶಾಂತಿ ಸಮಾಧಾನದಿಂದಿರುತ್ತದೆ ಎಂದು ಭಾಷಣಗಳಲ್ಲಿ ಮಾತ್ರ ಹೇಳುತ್ತಿದ್ದಾರೆ. ಸ್ತ್ರೀಯರಿಗೆ ಪ್ರಾತಿನಿಧ್ಯ ಏನೂ ಸಾಲದು. ಆಡಳಿತದ ನೌಕರಿಯಲ್ಲಿ ಬಡ ಉಪಾಧ್ಯಾಯಿನಿಯರು, ಗುಮಾಸ್ತರು ಅಲ್ಪಸ್ವಲ್ಪ ಇದ್ದಾರೆ. ಜ್ಯುಡಿಷಿಯಲ್ ಇಲಾಖೆಯಲ್ಲಿ ಅವರ ಗಂಧವೇ ಇಲ್ಲ. ಕೇರಳದ ಒಬ್ಬ ಮಹಿಳೆ ಹೈಕೋರ್ಟ್ ನ್ಯಾಯಾಧೀಶರಾಗಿ ಖ್ಯಾತಿಗಳಿಸಿರುವ ವಿಚಾರ ನಿಮಗೆ ಗೊತ್ತಿದೆ.

ಈಗ ಮಾಜಿಸ್ಟ್ರೇಟರನ್ನು ತೆಗೆದುಕೊಳ್ಳುತ್ತಾರೆಂದು ತಿಳಿದುಬಂದಿದೆ. ಕೆಲವು ಮಹಿಳಾ ಉಮೇದುವಾರರು ಅರ್ಜಿಗಳನ್ನು ಹಾಕಿ ಪಿ. ಎಸ್. ಸಿ. ಪರೀಕ್ಷೆಗಳಿಗೆ ಕುಳಿತಿದ್ದಾರೆ. ಪರೀಕ್ಷಾರ್ಥವಾಗಿಯಾದರೂ ಒಬ್ಬಿಬ್ಬರು ಮಹಿಳೆಯರನ್ನು ನ್ಯಾಯಾಧಿಕಾರ ಸ್ಥಾನಕ್ಕೆ ತೆಗೆದು ಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಮಹಿಳಾ ಪ್ರತಿನಿಧಿಗಳಾಗಿರುವ ಮಂತ್ರಿಗಳು ಈ ಬಗ್ಗೆ ಒತ್ತಾಯ ತರುತ್ತಾರೆಂತಲೂ ನಂಬಿದ್ದೇನೆ.

ಕೊನೆಯದಾಗಿ, ಆಯವ್ಯಯದ ಬಗ್ಗೆ ಯಾವುದು ಹೇಳುವುದು, ಯಾವುದು ಬಿಡುವುದು ಎಂಬ ಸಂದೇಹ ಬರುತ್ತಿದೆ. ಸಭಾಪತಿಗಳನ್ನು ನೋಡಿ ವೇಳೆಯ ಅಂಜಿಕೆಯೂ ಇದೆ. ಇದೇ ಕಾರಣ, ಅವಕಾಶ ಒದಗಿದಾಗಲೆಲ್ಲಾ ಸಂಬಂಧಪಟ್ಟವರು ಕೆಂಡದಂತೆ ಸಿಟ್ಟು ಮಾಡಿಕೊಂಡರೂ ಸರ್ಕಾರ ಮತ್ತು ದೇಶದ ಹಿತ ದೃಷ್ಟಿಯಿಂದ ಕಂಡದ್ದನ್ನೂ ಕೇಳಿದುದನ್ನೂ ನೋಡಿದುದನ್ನೂ ಯಾವ ಅಂಜಿಕೆಯೂ ಇಲ್ಲದೆ ಹೇಳುತ್ತಾ ಬರುತ್ತೇನೆ. ಪ್ರಜೆಗಳ ಅಭಿಪ್ರಾಯಗಳನ್ನು ಪ್ರಜಾ ಪ್ರತಿನಿಧಿಗಳಾದ ನಾವು ಹೇಳಬೇಕಾದುದು ಧರ್ಮ. ಅದನ್ನು ನಡೆಸಬೇಕಾದುದು ಸರ್ಕಾರದ ಕರ್ಮ ಎಂದು ಹೇಳಿ ರಾಜಕೀಯ ಮುಗ್ಗಟ್ಟಿನಲ್ಲಿ ಮುಗ್ಗರಿಸದೆ ಮುಂದರಿವ ಮುಂಜಾಗ್ರತೆಯನ್ನು ಮುಖ್ಯಮಂತ್ರಿಗಳಿಗೆ ಕೊಡಲೆಂದು ಮುಕ್ಕಣ್ಣನನ್ನು ಪ್ರಾರ್ಥಿಸಿ ಆಯವ್ಯಯವನ್ನು ಅನುಮೋದಿಸಿ, ಇಷ್ಟು ಹೇಳಲು ನನಗೆ ಅವಕಾಶಕೊಟ್ಟ ಅಧ್ಯಕ್ಷರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ.

6-00 P.M.

Sri N. O. SAMAJI (Belgaum II).—spoke in Marathi

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ. (ಬಾಗೇವಾಡಿ).—ಮಾನ್ಯಸಭಾಧ್ಯಕ್ಷರೇ, ೧೯೬೨-೬೩ ನೇ ಸಾಲಿನ ಆಯವ್ಯಯ ಪಟ್ಟಿಯನ್ನು ನಾನು ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಸರ್ಕಾರದವರು ಕಡ್ಡಾಯ ಶಿಕ್ಷಣದ ಬಗ್ಗೆ ಕೆಲವು ಸಲಹೆಗಳನ್ನು ಸೂಚಿಸಿದ್ದಾರೆ. ಅವುಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಬದಲಾಯಿಸಬೇಕೆಂದು ಹೇಳುತ್ತೇನೆ. ಶಾಲಾ ಕಟ್ಟಡಗಳ ಬಗ್ಗೆ ಹುಡುಗರಿಗೆ ಸ್ಥಳಾವಕಾಶ ನಮ್ಮ ಭಾಗದಲ್ಲಿ ಬಹಳ ಕಡಮೆ. ಅದಕ್ಕಾಗಿ ಸರ್ಕಾರದವರು ಹೆಚ್ಚಿಗೆ ಹಣ ಸಹಾಯವನ್ನು ಒದಗಿಸಬೇಕೆಂದು ಕೇಳುತ್ತೇನೆ. ನಾನು ಹಿಂದಿನ ಸಾರಿ ಈ ವಿಚಾರದಲ್ಲಿ ಹೇಳಿದ್ದೇನೆ. ಆದರೂ ನಮ್ಮ ಭಾಗದಲ್ಲಿ ಈ ಬಗ್ಗೆ ಸಾಕಷ್ಟು ಹಣ ಸಹಾಯವಾಗಿಲ್ಲ. ನಮ್ಮ ಸರ್ಕಾರದವರು ಐದು ವರ್ಷಗಳೊಳಗೆ ಶೇಕಡ 75 ರಷ್ಟು ಹಣಕೊಡಬೇಕು. ನಮ್ಮ ಭಾಗ ಶೇಕಡ 25 ರಷ್ಟು ಕೊಡುತ್ತೇವೆಂದು ಹೇಳಿದ್ದರೂ ಆ ರೀತಿ ಹಣ ಸಹಾಯ ನಮಗೆ ದೊರಕದೆ ಶಾಲಾ ಕಟ್ಟಡಗಳಿಗೆ ಬಹಳ ತೊಂದರೆಯಾಗಿದೆ. ಈಗ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಿರುವುದರಿಂದ ಹುಡುಗರಿಗೆ ಶಾಲೆಗಳಲ್ಲಿ ಸ್ಥಳಾವಕಾಶಕ್ಕೆ ತುಂಬಾ ತೊಂದರೆ ಉಂಟಾಗುತ್ತದೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚಿಗೆ ಗಮನಕೊಟ್ಟು ನಮ್ಮ ಭಾಗಕ್ಕೆ ಯಥೇಚ್ಛವಾಗಿ ಹಣ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಭಾಗ ಬಹಳವಾಗಿ ಬರಗಾಲ ಪ್ರದೇಶವಾಗಿದೆ. ಇರತಕ್ಕ ಕಟ್ಟಡಗಳು ಬಹಳ ಹಳೆಯವು ಆಗಿರುವುದರಿಂದ ಅವುಗಳು ಹಾಳು ಬೀಳುವ ಸ್ಥಿತಿಯಲ್ಲಿವೆ. ಈಗ ಈ ಬಾಬಿಗೆ ಕೊಡತಕ್ಕ ಹಣವನ್ನು ತಾಲ್ಲೂಕು ಬೋರ್ಡ್‌ಗಳಾಲೀ ಅಥವಾ ಪಂಚಾಯಿತಿಗಳಿಂದಾಗಲೀ ಹಂಚಲು ಶಕ್ಯವಿಲ್ಲ. ಯಾವರೀತಿ ಒತ್ತಾಯ ಶಿಕ್ಷಣವನ್ನು ನಮ್ಮ ಭಾಗದಲ್ಲಿ ಜಾರಿಗೆ ತಂದಿದ್ದೀರೋ ಅದನ್ನು ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ತಕ್ಕ ವ್ಯವಸ್ಥೆ ಇಲ್ಲದಿರುವುದು ನನಗೆ ಬಹಳ ಶೋಚನೀಯವಾಗಿದೆ. ಇತ್ತೀಚೆಗೆ ಬಿಜಾಪುರ ಜಿಲ್ಲೆಯೊಳಗೆ ಮೇಲಿಂದ ಮೇಲೆ ಬರಗಾಲ ಇದ್ದೇ ಇದೆ. ನಮ್ಮಲ್ಲಿ ೧೭ ಇಂಚಿನಷ್ಟು ಮಳೆಯಾಗುವುದರಿಂದ ಸ್ವಲ್ಪ ಬೆಳೆಯಾಗುತ್ತದೆ. ಕಾಲಕ್ಕೆ ಸರಿಯಾಗಿ ಮಳೆಯಾದರೆ ಹೆಚ್ಚು ಬೆಳೆ ಬರುತ್ತದೆ. ಆದರೆ ಒಂದೊಂದು ವೇಳೆ 3-4-5 ವರ್ಷಗಳ ಕಾಲ ಒಂದೇ ರೀತಿ ಬರಗಾಲ ವುಂಟಾಗುವುದರಿಂದ ಅಲ್ಲಿನ ಸ್ಥಿತಿ ಬಹಳ ಚಿಂತಾಜನಕವಾಗುತ್ತದೆ. ಆದ್ದರಿಂದ ಚಿಕ್ಕಚಿಕ್ಕ ನೀರಾವರಿ ಯೋಜನೆಗಳನ್ನು ನಮ್ಮ ಭಾಗದಲ್ಲಿ ಕೂಡಲೇ ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣ ಸಹಾಯವನ್ನು ಪಡೆಯಬೇಕು. ಇದರಿಂದ ಒಕ್ಕಲುತನದವರಿಗೆ ಹೆಚ್ಚಿನ ಮಟ್ಟಿಗೆ ಅನುಕೂಲವುಂಟಾಗುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ನಮ್ಮ ಜಿಲ್ಲೆಯೊಳಗೆ ಡಾಕ್ಟರುಗಳ ಅಭಾವ ಜಾಸ್ತಿ. ಅದಕ್ಕಾಗಿ ಹೆಚ್ಚಿಗೆ ಡಾಕ್ಟರುಗಳನ್ನು ನೇಮಿಸುವುದು ಬಹಳ ಮುಖ್ಯವಾದುದು. ಈ ಬಾಬಿಗೆ ಮುಂಬೈ ಸರ್ಕಾರದವರು ಹಿಂದೆ ಹೆಚ್ಚು ಹಣವನ್ನು ಒದಗಿಸುತ್ತಿದ್ದರು. ಅದೇ ರೀತಿಯಾಗಿ ನಮ್ಮ ಸರ್ಕಾರದವರೂ ಸಹ ನಮ್ಮ ಭಾಗಕ್ಕೆ ಹೆಚ್ಚಿಗೆ ಆಸ್ಪತ್ರೆಗಳ ಸೌಕರ್ಯವನ್ನು ಮತ್ತು ವಿಶೇಷವಾಗಿ ಡಾಕ್ಟರುಗಳನ್ನು ಒದಗಿಸುವುದು ಅತ್ಯಗತ್ಯವಾಗಿದೆ. ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಮುಂಬೈ ಕರ್ಣಾಟಕದಲ್ಲಿ ರಚನೆಯಾಗಿ ಈಗ್ಗೆ ೭-೮ ವರ್ಷಗಳಾದುವು. ಅದರಿಂದ ಬರತಕ್ಕ ಆದಾಯ ಹಳೆಯ ಮೈಸೂರಿಗಿಂತ ಮುಂಬೈ ಕರ್ಣಾಟಕದಲ್ಲಿ ಹೆಚ್ಚು ಇದೆ. ಈಗಿರತಕ್ಕ ಒಂದೊಂದು ಸರ್ಕಾರೀ ಬಸ್ಸಿನಲ್ಲಿ ೫೦ ಮಂದಿ ಹೋಗುತ್ತಿದ್ದಾರೆ. ಪ್ರಯಾಣ ಬಹಳ ಕಷ್ಟವಾಗುತ್ತದೆ. ಬಸ್ಸುಗಳ ಸೌಕರ್ಯ ಬಹಳ ಕಡಮೆ. ಖಾಸಗೀ ಬಸ್ಸುಗಳು ನಮ್ಮಲ್ಲಿಲ್ಲ. ಮುಂಬೈ ಕರ್ನಾಟಕದಿಂದ ಆದಾಯವುಂಟಾಗುತ್ತಿದೆ. ನಮ್ಮ ಭಾಗಕ್ಕೆ ಹೆಚ್ಚಿಗೆ ಬಸ್ಸುಗಳನ್ನು ಕೊಡಬೇಕು. ನಮ್ಮ ಕಡೆ ಲಗ್ಜುರಿ ಬಸ್ಸುಗಳೂ ಇಲ್ಲ. ಬಿಜಾಪುರದೊಳಗೆ ಟೂರಿಸ್ಟ್ ಬಸ್ಸುಗಳೇ ಇಲ್ಲ. ಆದ್ದರಿಂದ ಬಿಜಾಪುರದಲ್ಲಿ ಹೆಚ್ಚಿಗೆ ಬಸ್ಸುಗಳ ವ್ಯವಸ್ಥೆಯನ್ನು ಏರ್ಪಡಿಸಲು ಸರ್ಕಾರ ಹೆಚ್ಚು ಲಕ್ಷ್ಯ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯ ಆರೋಗ್ಯ ಇಲಾಖೆಯ ವಿಷಯವಾಗಿ ಹೇಳುವುದಾದರೆ ಈಗ ಈ ಬಡ್ಜೆಟ್‌ನಲ್ಲಿ ಈ ಬಾಬಿಗೆ ಒದಗಿಸಿರುವ ಹಣ ಬಹಳ ಕಡಮೆ. ಸರಿಯಾದ ಆಸ್ಪತ್ರೆಗಳೇ ಇಲ್ಲ. ಆಸ್ಪತ್ರೆಗಳಿದ್ದರೂ ಡಾಕ್ಟರುಗಳಿಲ್ಲ. ಡಾಕ್ಟರುಗಳಿದ್ದರೆ ಔಷಧಿಗಳೇ ಇರುವುದಿಲ್ಲ. ಇಂತಹ ಪರಿಸ್ಥಿತಿ ನಮ್ಮ ಭಾಗದಲ್ಲಿ ಉಂಟಾಗಿದೆ. ಸಾಮಾನ್ಯವಾಗಿ ನಾಯಿ ಕಚ್ಚಿದ್ದಕ್ಕೆ ಔಷಧಿ ಕೊಡಲಿಕ್ಕಾಗಲಿಲ್ಲ. ಹೀಗಾಗಿ ಬಡವರಿಗೆ ಔಷಧಿಗಳೇ ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರದವರು ಆರೋಗ್ಯ ಇಲಾಖೆಯ ಬಗ್ಗೆ ಹೆಚ್ಚು ಗಮನಕೊಟ್ಟು ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನೊದಗಿಸಬೇಕೆಂದು ನಾನು ಕೇಳುತ್ತೇನೆ.

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ)

ಇನ್ನು ರಸ್ತೆಗಳ ವಿಚಾರ. ನಮ್ಮ ಭಾಗದಲ್ಲಿ ರಸ್ತೆಗಳು ವಿಪರೀತವಾಗಿ ಕೆಟ್ಟು ಹೋಗಿದೆ. ಏಕೆಂದರೆ ನಮ್ಮ ಭಾಗದಲ್ಲಿ ಬರಗಾಲ ಮೇಲಿಂದ ಮೇಲೆ ಬರುತ್ತಾ ಇರುತ್ತದೆ. ಮಳೆಗಾಲದಲ್ಲಿ ರಸ್ತೆಗಳ ಸ್ಥಿತಿಯಂತೂ ಬಹಳ ಚಿಂತಾಜನಕವಾಗಿರುತ್ತದೆ. ಹಳ್ಳಿಯಿಂದ ಹಳ್ಳಿಗೆ ಹೋಗುವಾಗ ಹೊಳೆದಾಟಿ ರಸ್ತೆಗಳಿಗೆ ಹೋಗುವಾಗ ಬಹಳ ಕಷ್ಟವಾಗುತ್ತದೆ. ವರ್ಷಾನುಗಟ್ಟಲೆ ರಸ್ತೆಗಳು ರಿಪೇರಿಯಾಗದೆ ಕುಸಿದು ಬಿದ್ದು ಹೋಗಿರುತ್ತವೆ. ಪಿ. ಡಬ್ಲ್ಯು. ಡಿ. ಯವರಾಗಲೀ ಜಿಲ್ಲಾಬೋರ್ಡ್ ಅಥವಾ ತಾಲ್ಲೂಕ್ ಬೋರ್ಡ್‌ನವರಾಗಲೀ ಇದನ್ನು ಸರಿಯಾಗಿ ಗಮನಿಸುವುದಿಲ್ಲ. ಬರಗಾಲದೊಳಗೆ ಮಾಡಿದ್ದ ರೋಡು ಪಿ.ಡಬ್ಲ್ಯು.ಡಿ. ಯವರು ತೆಗೆದುಕೊಂಡಿಲ್ಲ. ಕೊನೆಯ ಪಕ್ಷ ೨೫-೩೦ ಮೈಲಿಗಳ ರಸ್ತೆಯನ್ನಾದರೂ ನಮ್ಮ ಕಡೆ ಮಾಡಿಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಅಲ್ಲಿ ಕೆಲವು ತಬ್ಬಲ ರೋಡ್‌ಗಳಿವೆ. ಅವನ್ನು ಯಾರಾದರೂ ದತ್ತು ತೆಗೆದುಕೊಳ್ಳಬಹುದು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಪಿ. ಡಬ್ಲ್ಯು. ಡಿ ಯವರು ರಸ್ತೆಗಳನ್ನು ರಿಪೇರಿ ಮಾಡಬೇಕೆಂದು ಸರ್ಕಾರದವರು ಆಜ್ಞೆಮಾಡಿದ್ದರೂ ಅವರು ಅದನ್ನು ಗಮನಿಸಲಿಲ್ಲ. ಸರ್ಕಾರ ಹತ್ತು ಲಕ್ಷ ಅಥವಾ 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಇದರಿಂದ ಹೆಚ್ಚು ಉಪಯೋಗವಾಗುತ್ತದೆ. ಕೊನೆಯ ಪಕ್ಷ ಹತ್ತು ಮೈಲಿಗಳ ರಸ್ತೆಯನ್ನಾದರೂ ಪಿ.ಡಬ್ಲ್ಯು. ಡಿ.ಯವರು ಮಾಡಲಿಲ್ಲ. ಮೇಲ್ಲಿಂದ ಮೇಲೆ ಬರಗಾಲ ನಮ್ಮ ಭಾಗದಲ್ಲಿ ಬರುತ್ತಿರುವುದರಿಂದ ಪಿ. ಡಬ್ಲ್ಯು.ಡಿ.ಯವರು ಜಾಗ್ರತೆಯಾಗಿ ದೊಡ್ಡ ದೊಡ್ಡ ರಸ್ತೆಗಳನ್ನು ರಿಪೇರಿಮಾಡಬೇಕೆಂದು ಹೇಳುತ್ತೇನೆ. ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳನ್ನು ಸಹ ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಈ ಕಡೆಗೆ ಸರ್ಕಾರ ಪೂರ್ಣ ಲಕ್ಷ್ಯಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಗ ನಮ್ಮ ಭಾಗದಲ್ಲಿ ಉಂಟಾಗತಕ್ಕ ಬರಗಾಲ ಹೋಗುತ್ತದೆ. ಅವುಗಳ ಕಡೆ ಹೆಚ್ಚು ಗಮನ ಕೊಡಬೇಕು.

ಅಲ್ಲಿ ಒಂದು ಚಿಕ್ಕಕೆರೆ ಇದ್ದರೆ ಬಾವಿಯಲ್ಲಿ ನೀರು ಹೋಗುತ್ತಾ ಇರಲಿಲ್ಲ. ಅವರಿಗೆ 40 ಸಾವಿರ ರೂಪಾಯಿಗಳು ಹಾಳಾಗುತ್ತಾ ಇರಲಿಲ್ಲ. ಅದರ ದೆಶೆಯಿಂದ ಮಾನ್ಯಮಂತ್ರಿಗಳು ದಯಮಾಡಿ ಬಿಜಾಪುರ ಜಿಲ್ಲೆಯೊಳಗೆ ಬರಗಾಲದ ಕೆರೆಯ ಕಾಮಗಾರಿ ಕೆಲಸವನ್ನು ಕೈಗೊಳ್ಳಬೇಕು. ಚಿಕ್ಕ ನೀರಾವರಿ ಯೋಜನೆಯನ್ನು ಮಾಡಬೇಕು. ಕೆರೆ ಕಟ್ಟೆಗಳನ್ನು ಕಟ್ಟಬೇಕು. ಒಕ್ಕಲಗರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಎಂದು ಹೇಳಿ ಮಾನ್ಯ ಸಭಾಪತಿಗಳು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet at 1-00 P.M. tomorrow.

The House adjourned at Twenty Minutes past Six of the Clock to meet, again at One of the Clock on Thursday the 5th July 1962.